www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಫೆಬ್ರವರಿ–02 ಫೆಬ್ರವರಿ 2015
Volume : IX Issue : 02 February 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**

Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ರೂತಳ ಪುಸ್ತಕದಲ್ಲಿ ಮೂವರು ಸ್ತ್ರೀಯರು
3. ಸ್ಥಳೀಯ ಮತ್ತು ವಿದೇಶ ಸುದ್ದಿ
4. ಆರೋಗ್ಯ ಸ್ವರ
5. ನೀತಿವಂತನ ಆಶೀರ್ವಾದಗಳು
6. ಆರಾಧನೆ
7. ಮಹಿಳೆಯರ ಸ್ವರ
8. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಕ್ರಿಸ್ತನಲ್ಲಿ ಪ್ರಿಯ ಸಹೋದರ/ಸಹೋದರಿಯರಿಗೆ ನನ್ನ ಆತ್ಮೀಯ ವಂದನೆಗಳು. ಹೊಸ ವರ್ಷದ ಮೊದಲನೆಯ ತಿಂಗಳನ್ನು ದಾಟಿ ಎರಡನೆ ತಿಂಗಳಿಗೆ ಕಾಲಿಟ್ಟಿದ್ದೇವೆ. ಅನೇಕರು ಹೊಸ ನಿರೀಕ್ಷೆಯೊಂದಿಗೆ ಹೊಸ ವರ್ಷವನ್ನು ಎದುರುಗೊಂಡಿದ್ದೀರಿ ದೇವರು ನಿಮ್ಮನ್ನು ಆಶೀರ್ವದಿಸಲಿ. ಯಾವಾಗ ನಾವು ದೇವರಿಗೆ ಸಂಪೂರ್ಣವಾಗಿ ನಮ್ಮ ಜೀವಿತವನ್ನು ಸಮರ್ಪಿಸುತ್ತೇವೆ ಮತ್ತು ಆತನ ಆಶ್ರಯಕ್ಕೆ ಓಡಿ ಬರುತ್ತೇವೆ ಆಗ ಅನೇಕ ವಿಧವಾದ ಆಶೀರ್ವಾದಗಳಿಂದ ನಮ್ಮನ್ನು ಆತನು ತುಂಬಿಸುವವನಾಗಿರುತ್ತಾನೆ. ಆ ಆಶೀರ್ವಾದಗಳ ಕುರಿತು ಸತ್ಯವೇದಿಂದ ಕೆಲವು ವಚನಗಳನ್ನು ಧ್ಯಾನಿಸೋಣ.

1) ಆತನ ಮರೆಹೊಕ್ಕವರೆಲ್ಲರು ಧನ್ಯರು (ಕೀರ್ತ. 2:12) :– ಹೌದು ಒಂದು ವೇಳೆ ನಮಗೆ ಗೊತ್ತಿರುವ ಶ್ರೇಷ್ಠ ವ್ಯಕ್ತಿಗಳ ಮೊರೆ ಹೋಗುವುದಾದರೆ ಅವರಿಂದ ಕೈ ಬಿಡಲ್ಪಡುವ ಪರಿಸ್ಥಿತಿ ಬರಬಹುದು ಆದರೆ ಕರ್ತನ ಮೊರೆ ಹೋದರೆ ಯಾರನ್ನು ಆತನು ಕೈಬಿಡುವುದಿಲ್ಲ.

   ನಮಗೆ ಸಹಾಯ ಬರುವುದು ಭೂಮಿ ಮತ್ತು ಆಕಾಶವನ್ನು ಉಂಟು ಮಾಡಿದ ಕರ್ತನಿಂದಲೇ (ಕೀರ್ತ. 121:1–2).

2) ಕೀರ್ತ. 5:12 ಇದರಲ್ಲಿ 3 ವಿಧವಾದ ಆಶೀರ್ವಾದಗಳಿವೆ.

1. ನಿನ್ನ ಮರೆಹೊಕ್ಕವರು ಸಂತೋಷಪಡುವರು.
2. ನೀನು ಕಾಪಾಡುವವನೆಂದು ಅವರು ಯಾವಾಗಲೂ ಆನಂದಧ್ವನಿಮಾಡುವರು.
3. ನಿನ್ನ ನಾಮವನ್ನು ಪ್ರೀತಿಸುವವರು ನಿನ್ನಲ್ಲಿ ಉಲ್ಲಾಸಗೊಳ್ಳುವರು, ಸಂತೋಷ, ಆನಂದ ಉಲ್ಲಾಸವು ನಮ್ಮ ದೇವರ ಮೊರೆ ಹೋಗುವಾಗ ಲೋಕದಿಂದ, ಹಣದಿಂದ ಸಿಗದ ಆಶೀರ್ವಾದಗಳು ನಮಗೆ ಸಿಗುತ್ತವೆ.

3) ಕೀರ್ತ. 9:10 ಇದರಲ್ಲಿ ಎರಡು ವಿಧವಾದ ಆಶೀರ್ವಾದಗಳಿವೆ :–

1. ಯಹೋವನೇ ನಿನ್ನ ನಾಮವನ್ನು ಬಲ್ಲವರು ನಿನ್ನಲ್ಲಿ ಭರವಸವಿಡುವರು.
2. ಯಾಕಂದರೆ ನಿನ್ನ ಮೊರೆ ಹೋಗುವವರನ್ನು ನೀನು ಕೈಬಿಡುವವನಲ್ಲಾ.

ಕರ್ತನ ನಾಮಮಹಿಮೆಯನ್ನು ಯಾರೆಲ್ಲ ತಿಳಿದುಕೊಳ್ಳುವರೋ ಅವರೆಲ್ಲಾ ಆತನಲ್ಲಿ ಭರವಸವಿಡುತ್ತಾರೆ. ಯೇಸುವಿನ ನಾಮದಲ್ಲಿ ದೆವ್ವಗಳು ಓಡುತ್ತವೆ, ಯೇಸುವಿನ ಹೆಸರಿನಲ್ಲಿ ಸೌಖ್ಯ ಉಂಟಾಗುತ್ತದೆ, ಯೇಸುವಿನ ಹೆಸರನ್ನು ಕೂಗುವ ಪ್ರತಿಯೊಬ್ಬನಿಗೆ ರಕ್ಷಣೆ ಇದೆ, ಬಿಡುಗಡೆ, ಸಮಾಧಾನ, ನೆಮ್ಮದಿ, ನಿತ್ಯಜೀವ ಎಲ್ಲವೂ ಆತನ ಹೆಸರಿನಲ್ಲಿ ಇದೆ. ಆತನ ನಾಮದ ಮಹಿಮೆ ತಿಳಿದುಕೊಂಡು ಆತನಲ್ಲಿ ಭರವಸೆ ಇಡೋಣ. ಯಾಕಂದರೆ ನಿನ್ನ ಮೊರೆಹೋಗುವವರನ್ನು ನೀನು ಕೈ ಬಿಡುವವನಲ್ಲಾ. ಪ್ರಿಯ ಸಹೋದರ/ಸಹೋದರಿಯರೇ ಹೊಸ ವರ್ಷ ಮೊದಲನೆ ತಿಂಗಳು ಕಳೆದು ಹೋದರೂ ನನ್ನಲ್ಲಿ ಯಾವುದೇ ಬಿಡುಗಡೆ ಆಶೀರ್ವಾದ ನಡೆಯಲಿಲ್ಲವೆಂದು ಕೊರಗಬೇಡ, ಯಾರು ನಿನ್ನನ್ನು ಕೈಬಿಟ್ಟರು ನಿನ್ನನ್ನು ಕೈಬಿಡದ ಒಬ್ಬ ದೇವರಿದ್ದಾನೆ ಆತನೇ ಕರ್ತನಾದ ಯೇಸುಕ್ರಿಸ್ತನು. ಆತನು ನಿನ್ನನ್ನು ಪ್ರೀತಿಸುತ್ತಾನೆ; ನಿನ್ನನ್ನು ಸಂತೈಸುತ್ತಾನೆ, ಕೊನೆವರೆಗೂ ನಡೆಸುತ್ತಾನೆ, ಕೊನೆವರೆಗೂ ನಿನ್ನೊಂದಿಗೆ ಇರುತ್ತಾನೆ ಆತನ ಆಶ್ರಯಕ್ಕೆ ಓಡಿ ಬಾ ಕರ್ತನು ನಿಮ್ಮನ್ನು ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಪ್ರಕಟಣೆ. 2:12–17 ಪೆರ್ಗಮ ಸಭೆ (ಪೆರ್ಗಮ ಅಂದರೆ ಮದುವೆ) ಈ ಸಭೆಯ ಕಾಲಾವಧಿ ಕ್ರಿಸ್ತಶಕ. 312 ರಿಂದ ಕ್ರಿ.ಶ 606ರವರೆಗಿನ ಸಭೆಯ ಕಾಲಕ್ಕೆ ಹೋಲಿಸಬಹುದು.

ಆಸ್ಯ ಸೀಮೆಯ ರೋಮಾಯಾ ರಾಜಧಾನಿ ಎನಿಸಿಕೊಂಡಿರುವ ಪೆರ್ಗಮ ಈ ದಿನದಲ್ಲಿ ಟರ್ಕಿ (ತುರ್ಕಿ) ದೇಶದಲ್ಲಿ ಇರುವಂಥದಾಗಿದೆ. ಇದು ಕಲೆ ಸಾಹಿತ್ಯ, ಐಶ್ವರ್ಯ ಹಾಗೂ ಡಂಭಾಚಾರದ ತವರಾಗಿತ್ತು. ಇದು ಕ್ರಿಸ್ತ ಪೂರ್ವ. 1000ದ ಸುಮಾರಿಗೆ ಸ್ಥಾಪಿತವಾಗಿದ್ದ ಪಟ್ಟಣ. ಇದು 2ನೇ ಅಟ್ಲಾಸನ್‌ನ ರಾಜಧಾನಿಯಾಗಿದ್ದು, ಅವನು ಅದನ್ನು ತನ್ನ ಆಳ್ವಿಕೆಯ ತರುವಾಯ ರೋಮಾಯರಿಗೆ ಕ್ರಿಸ್ತ ಪೂರ್ವ. 133ರಲ್ಲಿ ಹಸ್ತಾಂತರಿಸಿದನು. ಇದು ಕೋನಾಕೃತಿಯ ಹೆಬ್ಬಂಡೆಯ ಮೇಲೆ ಕಟ್ಟಿದ ಮಹಾ ಪಟ್ಟಣವಾಗಿತ್ತು. ಇಲ್ಲಿ ಸುಮಾರು 2 ಲಕ್ಷ ಸುರುಳಿಗಳನ್ನು ಹೊಂದಿದ್ದ ಮಹಾ ಗ್ರಂಥಾಲಯವಿತ್ತು. ಕ್ರಿಸ್ತ ಪೂರ್ವ. 197 ರಿಂದ ಕ್ರಿಸ್ತ ಪೂರ್ವ. 159ರವರೆಗೆ ಯುಮೇನಿಸ್ ಎಂಬವನಿಂದ ಸ್ಥಾಪಿತವಾದ ಈ ಗ್ರಂಥಾಲಯವನ್ನು ಕಲೀಫ್ ಓಮರನು ಕಂಡುಹಿಡಿದು ಅದನ್ನು ಅಭಿವೃದ್ಧಿ ಪಡಿಸಿದವರು ಪೆರ್ಗಮದವರಾಗಿದ್ದಾರೆ. ಪೆರ್ಗಮದವರಿಗೆ ವಾಸ್ಕೇಲೆಪಿಯೋಸ್ ಎಂಬ ಆರೋಗ್ಯ ದೇವತೆಯು ಪ್ರಾಮುಖ್ಯವಾಗಿತ್ತು. ಈ ಮಂದಿರಕ್ಕೆ ದೂರ ದೂರದ ದೇಶಗಳಿಂದ ಜನರು ತಮ್ಮ ರೋಗಗಳನ್ನು ವಾಸಿಮಾಡುವುದಕ್ಕಾಗಿ ಬರುತ್ತಿದ್ದರು. ವಸ್ಕೇಲೇಪಿಯೋನನನ್ನು ಇವರು ರಕ್ಷಕನಾದ ವಸ್ಕೇಲೇಪಿಯೋಸ್ ಎನ್ನುತ್ತಿದ್ದರು. ಪ್ರಕ. 2:13 ರಲ್ಲಿ ಕರ್ತನಾದ ಯೇಸುಕ್ರಿಸ್ತನು ಅಡವಿಯಲ್ಲಿ ಸೈತಾನನನ್ನು ದೇವರ ವಾಕ್ಯದಿಂದ ಸೋಲಿಸಿದಂತೆ ಹದವಾದ ಇಬ್ಬಾಯಿ ಕತ್ತಿಯನ್ನು ಹಿಡಿದಾತನು ಎಂಬುದಾಗಿ ಪ್ರಕಟ ಮಾಡಿಕೊಳ್ಳುತ್ತಿದ್ದಾನೆ. ಏಕಂದರೆ ದೇಶಾಧಿಪತಿಗೆ ಜನರನ್ನು ಮರಣದಂಡನೆಗೆ ಗುರಿಮಾಡುವ ಅಧಿಕಾರವಿತ್ತು. ಇವರು ಕತ್ತಿಯ ಶಕ್ತಿಯನ್ನು ಹೊಂದಿದ್ದರೂ ದೇವರು ದೇಶಾಧಿಪತಿಗಳಿಗಿರುವ ಕತ್ತಿಗಿಂತಲೂ ಶಕ್ತಿಯುತವಾದ ಕತ್ತಿಯನ್ನು ಹೊಂದಿದ್ದಾನೆಂದು ಪೆರ್ಗಮ ಸಭೆಗೆ ಜ್ಞಾಪಕ ಪಡಿಸುತ್ತಾನೆ. ನೀನು ಇರುವ ಸೈತಾನನ ನಿವಾಸದಲ್ಲಿ ನನಗೆ ನಂಬಿಗಸ್ತನೂ ಸಾಕ್ಷಿಯೂ ಆದ ಅಂತಿಫನೂ ಕೊಲ್ಲಲ್ಪಟ್ಟ ದಿನಗಳಲ್ಲಿ ನನ್ನಲ್ಲಿಟ್ಟಿರುವ ನಂಬಿಕೆಯನ್ನು ಮರೆಮಾಡಲಿಲ್ಲ. ಅಂದರೆ ಯೋಹಾನನ ಕಾಲದಲ್ಲಿ ಕ್ರೈಸ್ತರು ರೋಮಾಯ ಚಕ್ರವರ್ತಿಯನ್ನು ಆತನ ದೇಶಾಧಿಪತಿಗಳನ್ನು, ಸೈತಾನನ ಪ್ರತಿನಿಧಿಗಳೆಂದು ಪರಿಗಣಿಸುತ್ತಿದ್ದರು. ಕ್ರೈಸ್ತರು ತೀವ್ರವಾದ ಹಿಂಸೆಗೊಳಗಾಗುತ್ತಿದ್ದ ಸಮಯದಲ್ಲಿ ಅಂತಿಫನೆಂಬ ಒಬ್ಬ ಕ್ರೈಸ್ತ ನಾಯಕನನ್ನು, ಹಿತ್ತಾಳೆಯ ಬಸವನನ್ನು ಮಾಡಿ ಅದರೊಳಗೆ ಹಾಕಿ ಅದಕ್ಕೆ ಬೆಂಕಿ ಇಟ್ಟು ಆತನನ್ನು ಅದರೊಳಗೆ ಸುಟ್ಟು ಕೊಂದು ಹಾಕಿದರೆಂದು ಚರಿತ್ರೆ ಇದೆ. ಇಂತಹ ಮೈ ನಡುಗಿಸುವಂತಹ ಹಿಂಸೆಯ ಕಾಲದಲ್ಲಿಯೂ ಕೂಡ ಕ್ರಿಸ್ತನ ಹೆಸರನ್ನು ಬಿಡದೆ ಹಿಡಿದುಕೊಂಡ ನಂಬಿಗಸ್ಥರಾದ ಪೆರ್ಗಮ ಕ್ರೈಸ್ತರನ್ನು ಕರ್ತನು ಮೆಚ್ಚುತ್ತಿದ್ದಾನೆ.

ಪ್ರಕ. 2:14 ಗೋಧಿಯ ಹೊಲದಲ್ಲಿ ಹಣಜಿಯನ್ನು ವೈರಿಯು ಬಿತ್ತಿರುವಂತೆ ಸೈತಾನನು ಸಭಾ ಚರಿತ್ರೆಯಲ್ಲಿ ಎಲ್ಲಾ ಸಭೆಗಳಲ್ಲಿಯೂ ದುರ್ಬೋಧನೆಯನ್ನು ಬೋಧಿಸುವವನಾಗಿರುತ್ತಾನೆ. ಹಾಗೆಯೇ ಪೆರ್ಗಮ ಸಭೆಯಲ್ಲಿ ಬಿಳಾಮನ ಮತ್ತು ನಿಕೊಲಾಯಿತರ ಬೋಧನೆಯನ್ನು ಅನುಸರಿಸುವವರು ಸಭೆಯೊಳಗೆ ನುಸುಳಿ ಸಭೆಯನ್ನು ಕೆಡಿಸುವವರಾಗಿರುತ್ತಾರೆ.

1) **ನಿಕೊಲಾಯಿತರ ಬೋಧನೆ :–** ನಿಕೋಲಾ ಅಂದರೆ ಜನರನ್ನು ದುರ್ಬೋಧನೆಯಿಂದ ಸ್ವಾಧೀನಪಡಿಸುವುದು ಎಂದರ್ಥ. ಅ.ಕೃ. 6:5 ರಲ್ಲಿ ನಿಕೊಲಾಯ ಎಂಬ ಶಿಷ್ಯನಿದ್ದನು. ಅವನು ಅಂತಿಯೋಕ್ಯದ ನಿವಾಸಿಯಾಗಿದ್ದನು. ಇವನು ಮುಂದೆ ಸೇವೆ ಮಾಡುತ್ತಾ ದೇವರ ವಾಕ್ಯಕ್ಕೆ ವಿರುದ್ಧವಾದ ಬೋಧನೆಯನ್ನು ಸ್ಥಾಪಿಸಿದನು. ಈ ಪಂಗಡದವರ ಬೋಧನೆಗಳು (ನಿಕಾ– ಸ್ವಾಧೀನಪಡಿಸು, ಲಾಮೋಸ್– ಜನರು)
   1) ಅನೈತಿಕ ಸಂಬಂಧವು ಪಾಪವಲ್ಲ
   2) ವಿಗ್ರಹಕ್ಕೆ ನೈವೇದ್ಯ ಮಾಡಿದ್ದನ್ನು ತಿನ್ನಬಹುದು
   3) ಜ್ಞಾನದಿಂದ ಮನುಷ್ಯನಿಗೆ ಬಿಡುಗಡೆಯಗುತ್ತದೆ
   4) ಧರ್ಮಶಾಸ್ತ್ರ ನಿಂತು ಹೋಯಿತು. ಕ್ರಿಸ್ತನ ಸ್ವಾತಂತ್ರ್ಯದಲ್ಲಿ ವಿಶ್ವಾಸಿಗಳಿಗೆ ಹೇಗೆ ಬೇಕಾದರೂ ಜೀವಿಸಬಹುದು (ಗಲಾ. 5:13, 1 ಕೊರಿ. 6:12, 10:23).
   5) ವಿಶ್ವಾಸಿಗಳು ಕೃಪೆಗೆ ಪಾತ್ರ ಆದುದರಿಂದ ಹೇಗೆ ಜೀವಿಸಿದರೂ ಕರ್ತನು ಕ್ಷಮಿಸುತ್ತಾನೆ.
2) **ಬಿಳಾಮನ ಬೋಧನೆ :–** ಬಿಳಾಮನು ಮೋವಾಬ್ಯ ಸ್ತ್ರೀಯರನ್ನು ಪ್ರೇರೇಪಿಸಿ ಇಸ್ರಾಯೇಲ್ಯರು ಅವರನ್ನು ವಿವಾಹವಾಗುವಂತೆಯೂ, ಅನೈತಿಕತೆ ನಡೆಸುವಂತೆಯೂ,

ಬನ್ನಿರಿ; ನಮ್ಮ ನಿರ್ಮಾಣಿಕನಾದ ಯೆಹೋವನಿಗೆ ಸಾಷ್ಟಾಂಗವೆರಗಿ ಆರಾಧಿಸೋಣ (ಕೀರ್ತ. 95:6).

ವಿಗ್ರಹಗಳಿಗೆ ಬಲಿಯರ್ಪಿಸಿದ್ದನ್ನು ತಿನ್ನುವಂತೆಯೂ ಮಾಡಿದ ಅನ್ಯ ಪ್ರವಾದಿಯಾಗಿದ್ದನು. ಅರಣ್ಯ. 25:1–8, 31:14–17 ರಲ್ಲಿ "ಇಸ್ರಾಯೇಲ್ಯರು ಶಿಟ್ಟೀಮಿನಲ್ಲಿ ವಾಸವಾಗಿದ್ದಾಗ ಅವರು ಮೋವಾಬ್ ಸ್ತ್ರೀಯರೊಡನೆ ಸಹವಾಸಮಾಡುವವರಾದರು. ಆ ಸ್ತ್ರೀಯರು ತಮ್ಮ ದೇವತೆಗಳಿಗೆ ಮಾಡಿದ ಔತಣದ ಯಜ್ಞಗಳಿಗೆ ಇಸ್ರಾಯೇಲ್ಯರನ್ನು ಕರಿಸಲು ಇವರು ಆ ಭೋಜನವನ್ನು ಮಾಡಿ ಅವರ ದೇವತೆಗಳಿಗೆ ನಮಸ್ಕರಿಸುವವರಾದರು".

**ಬಿಳಾಮನ ಉಪದೇಶ :–** ಇಸ್ರಾಯೇಲ್ಯರು ಮರುಭೂಮಿಯ ಪ್ರಯಾಣದಲ್ಲಿ ಮೋವಾಬ್ ದೇಶದಲ್ಲಿ ನಿಂತಿದ್ದಾರೆ. ಅರಸನಾದ ಬಾಲಕನು ಹೆದರಿ ಇಸ್ರಾಯೇಲರನ್ನು ಯುದ್ಧಮಾಡಿ ಜಯಿಸಲು ಸಾಧ್ಯವಿಲ್ಲವೆಂಬುದನ್ನು ಅರಿತು ಅವರನ್ನು ಶಪಿಸಲು ಪ್ರವಾದಿಯಾದ ಬಿಳಾಮನನ್ನು ಕರೆದನು. ಅರಣ್ಯ. 22 ರಿಂದ 25 ಅಧ್ಯಾಯಗಳು. ಬಾಲಕನು ಮೋವಾಬ್ಯರ ಅರಸನಾಗಿದ್ದನು. ಬಾಲಕ ಅಂದರೆ ಧ್ವಂಸಕನು ಎಂದು ಅರ್ಥ. ಬಿಳಾಮ ಅಂದರೆ BELA – ಅಧೀನಪಡಿಸು (ಇಬ್ರಿಯ) Laam – ಜನರು ಅದರ ಅರ್ಥ :– ಜನರನ್ನು ತಪ್ಪಾದ ಉಪದೇಶ ಮಾಡಿ ಸ್ವಾಧೀನಪಡಿಸಿಕೊಳ್ಳುವುದು.

1) **ಬಿಳಾಮನ ದಾರಿ :–** 2 ಪೇತ್ರ. 2:15 ಇವರು ನೀಟಾದ ಮಾರ್ಗವನ್ನು ಬಿಟ್ಟು ಬೆಯೋರನ ಮಗನಾದ ಬೀಳಾಮನ ಮಾರ್ಗವನ್ನು ಹಿಡಿದು ತಪ್ಪಿ ಹೋಗಿದ್ದಾರೆ. ಈ ಬಿಳಾಮನು ಅಧರ್ಮದಿಂದ ದೊರಕುವ ದ್ರವ್ಯವನ್ನು ಪ್ರೀತಿಸಿದನು. ಇವನು ಎರಡು ಮನಸ್ಸುಳ್ಳ ಪ್ರವಾದಿಯಾಗಿದ್ದನು. ದೇವರ ನಾಮವನ್ನು ಹಣಕ್ಕಾಗಿ ಉಪಯೋಗಿಸಿದ ಮೊದಲ ವ್ಯಕ್ತಿ. ಆದಿ ಸಭೆಯ ಸಭಾಪಾಲಕರು ಜೀವಿಸುತ್ತಿದ್ದದ್ದು (1 ಥೆಸ. 2:5–6)

3 ಯೋಹಾ. 7–8 ರ ಪ್ರಕಾರ ಯಾಕಂದರೆ ಅವರು ಕ್ರಿಸ್ತನ ಹೆಸರನ್ನು ಪ್ರಸಿದ್ಧಿ ಪಡಿಸುವುದಕೋಸ್ಕರ ಹೊರಟು ಹೋಗಿದ್ದಾರೆ ಮತ್ತು ಅನ್ಯ ಜನಗಳಿಂದ ಏನೂ ತೆಗೆದುಕೊಳ್ಳುವವರಲ್ಲ ಆದುದರಿಂದ ನಾವು ಸತ್ಯಕ್ಕೆ ಸಹಕಾರಿಗಳಾಗುವಂತೆ ಅಂಥವರನ್ನು ಸೇರಿಸಿಕೊಳ್ಳುವ ಹಂಗಿನಲ್ಲಿದ್ದೇವೆ. "ಸತ್ಯವನ್ನು ಅಂದರೆ ಜ್ಞಾನ ಸುಶಿಕ್ಷೆ ವಿವೇಕಗಳನ್ನು ಕೊಂಡುಕೋ; ಮಾರಿ ಬಿಡಬೇಡ" (ಜ್ಞಾನೋ. 23:23) ಎಂದು ಹೇಳುತ್ತದೆ. ನಾವು ಹಣಕ್ಕಾಗಿ ಸೇವೆಮಾಡಬಾರದು, ಸೇವೆಗಾಗಿ ಹಣಬೇಕು ಅದನ್ನು ಕರ್ತನು ಒದಗಿಸುತ್ತಾನೆ. 1 ತಿಮೊ. 6:10ರ ಪ್ರಕಾರ ಅನೇಕ ದೇವಸೇವಕರು, ದೇವಜನರು ಹಣದಾಶೆಗೆ ಒಳಗಾಗಿ ಕ್ರಿಸ್ತನಂಬಿಕೆಯಲ್ಲಿ ಭ್ರಷ್ಟರಾದ ಎಷ್ಟೋ ಉದಾಹರಣೆಗಳನ್ನು ಸತ್ಯವೇದದಲ್ಲೂ, ಲೋಕದಲ್ಲೂ ನಾವು ಕಾಣಬಹುದು.

2) **ಬಿಳಾಮನ ವಂಚನೆ :–** "ಇವರು ಕಾಯಿನನ ಮಾರ್ಗವನ್ನು ಹಿಡಿದವರೂ ದ್ರವ್ಯ ಸಂಪಾದನೆಗೋಸ್ಕರ ಬಿಳಾಮನ ಭ್ರಾಂತಿಯಲ್ಲಿ ಪೂರ್ಣವಾಗಿ ಮುಣುಗಿದವರೂ ಕೋರಹನಂತೆ ಎದುರು ಮಾತುಗಳನ್ನಾಡಿ ನಾಶವಾಗಿ ಹೋಗತಕ್ಕವರೂ ಆಗಿದ್ದಾರೆ" (ಯೂದ. 1:11). ಕೃಪಾವರದ ನೆರಳಿನಲ್ಲಿ ಹಣವನ್ನು ಸಂಪಾದಿಸಿ ದೇವ ಜನರನ್ನು ವಂಚಿಸುವುದು. ಇಂದು ಅನೇಕ ಕಡೆ ಕೃಪಾವರಗಳುಳ್ಳ ದೇವಸೇವಕರು ಕೃಪಾವರಗಳಿಂದ ವ್ಯಾಪಾರ ಮಾಡುವುದನ್ನು ಕಾಣಬಹುದು. ಒಂದು ಪ್ರವಾದನೆ ಹೇಳಿದರೆ ಒಂದು ಸಾವಿರ ರೂಪಾಯಿ, ಒಂದು ದೆವ್ವ ಬಿಡಿಸಿದರೆ 2 ಸಾವಿರ ರೂಪಾಯಿ.

3) **ಬಿಳಾಮನ ಉಪದೇಶ :–** (ಪ್ರಕ. 2:14) ಬಿಳಾಮನು ಇಸ್ರಾಯೇಲ್ಯರನ್ನು ಶಪಿಸಲು ಬಂದಾಗ ಆತನು ಕಂಡದ್ದು. ನಾವು ಲೋಕದಿಂದಲೂ, ಪಾಪದಿಂದಲೂ ಬೇರ್ಪಟ್ಟ ಅನುಭವದಲ್ಲಿ ಜೀವಿಸುವವರಾಗಿದ್ದಾರೆ. ಯಾವ ಮಾಟವೂ, ಮಂತ್ರವೂ, ಶಾಪವೂ ನಮಗೆ ತಗಲದು. (ಅರಣ್ಯ. 23:7–26) "ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು" (ಕೀರ್ತ. 91:1). ಬಿಳಾಮನು ಬೆಟ್ಟದ ಶಿಖರದಿಂದ ಇಸ್ರಾಯೇಲ್ಯರನ್ನು ನೋಡಿದಾಗ "ಬೆಟ್ಟದ ಶಿಖರದಿಂದ ನಾನು ಅವರನ್ನು ಕಂಡೆನು; ಗುಡ್ಡದಿಂದ ಅವರನ್ನು ನೋಡಿದೆನು. ಆ ಜನಾಂಗವು ತಾನು ಇತರ ಜನಾಂಗಗಳಂತಲ್ಲವೆಂದು ಭಾವಿಸಿಕೊಂಡು ಪ್ರತ್ಯೇಕವಾಗಿ ವಾಸಿಸುತ್ತದೆ" (ಅರಣ್ಯ. 23:9).

ಮೋವಾಬ್ಯ ಅರಸನಿಂದ ಹಣ ತೆಗೆದುಕೊಂಡ ಬಿಳಾಮನಿಗೆ ಇಸ್ರಾಯೇಲ್ಯರನ್ನು ಶಪಿಸಲು ಸಾಧ್ಯವಾಗಲಿಲ್ಲ. ಯಾಕಂದರೆ ದೇವರು ಬಿಡಲಿಲ್ಲ. ಆತನು ಹೊಸ ಉಪದೇಶ ತರುತ್ತಿದ್ದಾನೆ. ಅದೇನೆಂದರೆ ಮೋವಾಬ್ಯ ಹೆಂಗಸರನ್ನು ಇಸ್ರಾಯೇಲ್ಯರ ಮಧ್ಯದಲ್ಲಿ ಕಳುಹಿಸಿ ಇಸ್ರಾಯೇಲ್ಯರನ್ನು ಕೆಡಿಸುವುದು ತಮ್ಮ ಪವಿತ್ರತೆ ಕಳಕೊಂಡ ಇಸ್ರಾಯೇಲ್ಯರು ದೇವರ ಕೋಪಕ್ಕೆ ಗುರಿಯಾಗುತ್ತಾರೆ. ಕೊನೆಗೆ ದೇವರ ಮತ್ತು ದೇವಜನರಾದ ಇಸ್ರಾಯೇಲ್ಯರ ಅನ್ಯೋನ್ಯತೆ ಮುರಿದು ಹೋಗುತ್ತದೆ. ಆಗ ಮೋವಾಬ್ಯರು ಇಸ್ರಾಯೇಲ್ಯರನ್ನು

ಎಡವಿ ಬೀಳುವವರನ್ನು ನಿನ್ನ ಮಾತುಗಳಿಂದ ಉದ್ಧರಿಸಿ ಕುಸಿಯುವ ಮೊಣಕಾಲುಗಳನ್ನು ದೃಢಪಡಿಸಿದ್ದೀ (ಯೋಬ. 4:4).

ಸುಲಭವಾಗಿ ಜಯಿಸಬಹುದು. ಬಿಳಾಮನಿಂದ ಉಪದೇಶ ಹೊಂದಿಕೊಂಡ ಬಾಲಕನು ಅದನ್ನು ಕಾರ್ಯರೂಪಕ್ಕೆ ತಂದನು. ಇಸ್ರಾಯೇಲ್ಯರು ಪವಿತ್ರತೆ ಕಳೆದುಕೊಂಡು ದೇವರ ಕೋಪಕ್ಕೆ ಗುರಿಯಾದರು. ಇಸ್ರಾಯೇಲ್ಯರು ವ್ಯಭಿಚಾರಿಗಳಾದದ್ದರಿಂದ ಅವರಿಗೆ ಶಾಪ ಬಂದು ಘೋರವಾದ ರೋಗಕ್ಕೆ ತುತ್ತಾದರು. ಇದರಿಂದ 24 ಸಾವಿರ ಮಂದಿ ಸಾಯಬೇಕಾಯಿತು. (ಅರಣ್ಯ. 25:9).

ಈ ವಿಧವಾದ ದುರ್ಬೋಧನೆಯು ಅಂದರೆ ಬಿಳಾಮನ ಉಪದೇಶವನ್ನು ಪೆರ್ಗಮ ಸಭೆಯು ಅಂಗೀಕರಿಸಿದೆ ಎಂದು ಕರ್ತನ ಆತ್ಮನು ಮಾನಸಾಂತರ ಪಡಲು ಪೆರ್ಗಮ ಸಭೆಯನ್ನು ಎಚ್ಚರಿಸುತ್ತಿದ್ದಾನೆ.

1) ಪೆರ್ಗಮ ಸಭೆ ಇರುವ ಸ್ಥಳವು ಸೈತಾನನ ಸಿಂಹಾಸನವಿರುವ ಸ್ಥಳವಾಗಿತ್ತು. ಇದರಿಂದಾಗಿ ಆ ಪಟ್ಟಣದಲ್ಲಿ ಅನೇಕ ವಿಧವಾದ ಪಾಪ ಕೃತ್ಯಗಳು, ಸೈತಾನನ ಆರಾಧನೆಗಳು, ವಿಗ್ರಹಾರಾಧನೆಗಳು, ಇದ್ದೀರಬಹುದು.

2) ನಂಬಿಗಸ್ತ ಅಂತಿಫನು ಕ್ರಿಸ್ತನಂಬಿಕೆಯಲ್ಲಿ ನಿಂತದ್ದರಿಂದ ರಕ್ತಸಾಕ್ಷಿಯಾಗಿ ಕೊಲ್ಲಲ್ಪಟ್ಟನು.

3) ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುತ್ತಿದ್ದರು.

4) ಅನೈತಿಕತೆಗೆ ಪ್ರೋತ್ಸಾಹವಿತ್ತು.

5) ನಿಕೊಲಾಯಿತರ ಭೋದನೆಯನ್ನು ಅಂಗೀಕರಿಸಿದವರು ಇದ್ದರು. ಇವೆಲ್ಲವುಗಳ ಮೇಲೆ ಜಯ ಹೊಂದಿ ಜಯದ ಜೀವಿತ ನಡೆಸುವ ಕ್ರೈಸ್ತ ವಿಶ್ವಾಸಿಗೆ ದೇವರು ಇಟ್ಟಿರುವ ಆಶೀರ್ವಾದಗಳ ಕುರಿತು ಪರಿಶುದ್ಧಾತ್ಮನು ಪ್ರಕಟಿಸಿದನು.

1) ಬಚ್ಚಿಟ್ಟಿರುವ ಮನ್ನವೆಂಬ ಆಹಾರ (ಪ್ರಕ. 2:17).

2) ಬಿಳಿಕಲ್ಲು

3) ಆ ಕಲ್ಲಿನ ಮೇಲೆ ಕೆತ್ತಿದ ಹೊಸ ಹೆಸರು.

1) **ಬಚ್ಚಿಟ್ಟಿರುವ ಮನ್ನವೆಂಬ ಆಹಾರ** :– (ವಿಮೋ.16:11–15) ಈ ಮನ್ನವನ್ನು ದೇವರ ಒದಗಿಸುವಿಕೆಯ ನೆನಪಿಗಾಗಿ ಮಂಜೂಷದಲ್ಲಿ ಇಟ್ಟರು. ಇದು ದೇವರಿಂದ ದೊರೆತ ದೇವದೂತರ ಆಹಾರವಾಗಿತ್ತು. (ವಿಮೋ.16:33–34, ಕೀರ್ತ. 78:24–25). ಫಿಲಿಷ್ಟಿಯರು ಏಲಿ ಎಂಬ ಯಾಜಕ ಮತ್ತು ಸಮುವೇಲನ ಕಾಲದಲ್ಲಿ ಯುದ್ಧಮಾಡಿ ಮಂಜೂಷವನ್ನು ಹೊತ್ತುಕೊಂಡು ಹೋದ ಸಂದರ್ಭದಲ್ಲಿ ಮಂಜೂಷದಲ್ಲಿದ್ದ ಮನ್ನವು ನಾಶವಾಯಿತು. ಮಂಜೂಷವನ್ನು ತೆಗೆದುಕೊಂಡು ಹೋದಂತಹ ಫಿಲಿಷ್ಟಿಯರಿಗೆ ಅನೇಕ ವಿಧವಾದ ಸಮಸ್ಯೆಗಳು, ಗಡ್ಡೆ ರೋಗಗಳು ಸಂಭವಿಸಿದಾಗ ಅವರು ಮಂಜೂಷವನ್ನು ಇಸ್ರಾಯೇಲಿಗೆ ತಿರುಗಿ ಕಳುಹಿಸಲು ಇಸ್ರಾಯೇಲ್ಯರು "ಯೆಹೋವನ ಮಂಜೂಷವನ್ನು ತೆಗೆದುಕೊಂಡು ಹೋಗಿ ಗುಡ್ಡದ ಮೇಲೆ ವಾಸವಾಗಿದ್ದ ಅಬೀನಾದಾಬನ ಮನೆಯಲ್ಲಿಟ್ಟು ಅವನ ಮಗನಾದ ಎಲ್ಲಾಜಾರನನ್ನು ಅದರ ಸೇವೆಗೋಸ್ಕರ ಪ್ರತಿಷ್ಠಿಸಿದರು" (1 ಸಮು. 7:1–2). ಅಲ್ಲಿ ಮಂಜೂಷವು 20 ವರ್ಷಗಳವರೆಗೆ ಇತ್ತು. ಕೆಲವು ವರ್ಷಗಳು ಕಳೆದ ಮೇಲೆ ಸೊಲೊಮೋನನು ದೇವಾಲಯ ಕಟ್ಟಿಸಿ ಮಂಜೂಷವನ್ನು ಮಹಾಪರಿಶುದ್ಧ ಸ್ಥಳದಲ್ಲಿ ಇರಿಸಿದನು. ಎರಡು ಕಲ್ಲಿನ ಹಲಿಗೆಗಳು ಮಾತ್ರ ಇದ್ದವು (2 ಪೂರ್ವ. 5:10). ಒಂದು ಕಥೆ ಇದೆ ಪ್ರವಾದಿಯಾದ ಯೆರೆಮೀಯನು ಈ ಮನ್ನವನ್ನು ಸೀನಾಯಿ ಪರ್ವತದಲ್ಲಿ ಹೂತಿಟ್ಟಿದ್ದಾನೆಂದು ಮೆಸ್ಸಿಯನು ಬರುವಾಗ ಅದನ್ನು ತೆಗೆದು ಯೆಹೂದ್ಯರಿಗೆ ಕೊಡುತ್ತಾನಂತೆ. ಮೆಸ್ಸಿಯನ 1000 ವರ್ಷಗಳ ಆಳ್ವಿಕೆಯಲ್ಲಿ ತಿಂದು ಸಂತೋಷಪಡುತ್ತಾರೆ.

2) **ಬಿಳಿಕಲ್ಲು** :– ಪರಿಶುದ್ಧತೆ ಮತ್ತು ದೇವರ ಮೆಚ್ಚುಗೆಯನ್ನು ಸೂಚಿಸುತ್ತದೆ. ಯುದ್ಧ ಜಯಿಸಿ ಬಂದ ಸೈನಿಕರಿಗೆ ಬಿಳಿ ಕಲ್ಲನ್ನು ಕೊಟ್ಟು ಗೌರವಿಸುತ್ತಿದ್ದರು. ಬಿಳಿ ಕಲ್ಲು ಅಂದರೆ ಲೋಕದಲ್ಲಿ ನಂಬಿಕೆಯ ಯುದ್ಧ ಜಯಿಸಿ ಬರುವಂತಹ ತನ್ನ ಭಕ್ತನಿಗೆ ಕರ್ತನು ಗೌರವಿಸುವಂತಹ ವಿಧಾನವಾಗಿದೆ.

3) **ಆ ಕಲ್ಲಿನ ಮೇಲೆ ಕೆತ್ತಿದ ಹೊಸ ಹೆಸರು** :– ನಮ್ಮ ಜಯ ಮತ್ತು ಸಾಧನೆಗೆ ಕರ್ತನು ನೀಡುವ ಪ್ರಶಸ್ತಿ. ಮೋಸಗಾರನಾದ ಯಾಕೋಬನು ಇಸ್ರಾಯೇಲ್ ಎಂಬ ಹೆಸರನ್ನು ಪಡೆದಂತೆ ಜಯಶಾಲಿಗಳಾದ ಭಕ್ತರಿಗೂ ಹೊಸ ಹೆಸರನ್ನು ಕೊಡುವಾತನಾಗಿದ್ದಾನೆ. ಮಾನಸಾಂತರ ಪಡದಿದ್ದರೆ ಕರ್ತನು ತನ್ನ ಬಾಯಕತ್ತಿಯಿಂದ ಯುದ್ಧಮಾಡುತ್ತಾನೆ. "ನನ್ನನ್ನು ಲಕ್ಷ್ಯಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪು ಮಾಡುವಂಥದು ಒಂದು ಇದೆ, ಅದು ಯಾವದೆಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವದು" (ಯೋಹಾ. 12:48).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ (ಯಾಕೋ. 5:16).

## ರೂತಳ ಪುಸ್ತಕದಲ್ಲಿ ಮೂವರು ಸ್ತ್ರೀಯರು

ಸತ್ಯವೇದದಲ್ಲಿ 8ನೆಯ ಪುಸ್ತಕವಾದ ರೂತಳ ಪುಸ್ತಕವು ಮೊದಲನೆಯ ಅಧ್ಯಾಯದಲ್ಲಿಯೇ 3 ಜನ ವಿಧವೆಯರ ಕುರಿತಾಗಿ ಬರೆಯಲ್ಪಟ್ಟಿದೆ. ಆದರಣೆಯೇ ಇಲ್ಲದ ಸ್ಥಿತಿಯಲ್ಲಿ ಜೀವನದ ಸಮಸ್ಯೆಗಳಲ್ಲಿ ಅವರು ಮಾಡಿದ್ದೇನು....?

1. **ನೊವೊಮಿ :** ನೊವೊಮಿಯು ತನ್ನ ಸ್ವಂತ ಊರಾದ ಬೇತ್ಲೆಹೇಮಿಗೆ ಹೊರಟಳು. ಹಿಂತಿರುಗಿ ಹೋಗುವಾಗ ತನ್ನ ದೇಶಕ್ಕೆ ಸೇರಿದ ಸೊಸೆಯಂದಿರನ್ನು ಕರೆದುಕೊಂಡು ಹೋದರೆ ತನ್ನ ಕುಟುಂಬದಲ್ಲಿ ತಾನು ನಿಂದೆಗೆ ಗುರಿಯಾಗುವನೆಂದು ನೆನಸಿ ಭಯಪಟ್ಟಳು. ಇದಕ್ಕಾಗಿ ತನ್ನ ವೃದ್ಧಾಪ್ಯ ಸ್ಥಿತಿಯನ್ನು ಅವರ ಮುಂದಿಟ್ಟು ತನ್ನನ್ನು ಬಿಟ್ಟು ಹೋಗುವಂತೆ ಬೇಡಿಕೊಂಡಳು. ಹೀಗೆ ತನ್ನ ಸಮಸ್ಯೆಯಿಂದ ಸೊಸೆಯಂದಿರನ್ನು ಕೈ ಬಿಡುತ್ತಾಳೆ ನವೊಮಿ.
2. **ಒರ್ಫಾಳು :** ಅತ್ತೆಯು ಹೇಳಿದ ತಕ್ಷಣ ನಂಬಿಕೆಯನ್ನು ಕಳೆದುಕೊಂಡ ಒರ್ಫಾಳು ತನ್ನ ಬಂಧುಗಳ ಬಳಿಗೆ ಹಿಂದಿರುಗಿ ಹೊರಟುಹೋದಳು. ನಂಬಿಕೆಯನ್ನು ಕಳೆದುಕೊಂಡು ಹಿಂದಿರುಗಿ ಹೋದಳು ಒರ್ಫಾಳು.
3. **ರೂತಳು :** ನೊವೊಮಿಯ ಅಪನಂಬಿಕೆಯ ಮಾತುಗಳು ಒರ್ಫಾಳ ಮನಸ್ಸು ಬದಲಾಯಿಸುವಿಕೆ ಇವುಗಳ ಮಧ್ಯದಲ್ಲಿ ಜೀವವುಳ್ಳ ದೇವರನ್ನು ನಂಬಿ ದೃಢವಾಗಿ ನಿಂತಳು ರೂತಳು.

ರೂತಳು – ಇವಳ ಸಂತತಿಯಲ್ಲಿ ಯೇಸು ಹುಟ್ಟಿದ್ದು. ನೊವೊಮಿಯು ಸಮಸ್ಯೆಯನ್ನು ಮುಚ್ಚಲು ನೋಡಿದಳು. ಒರ್ಫಾಳು ಭಯಪಟ್ಟು ಓಡಿದಳು. ದೇವರನ್ನು ನಂಬಿ ದೃಢವಾಗಿ ನಿಂತಳು ರೂತಳು.

## ನೀವು ಏನು ಮಾಡುತ್ತೀರಿ?

ಸೌಲನು ವಿಚಾರಣೆ ಮಾಡಿದ ಎರಡು ಸ್ಥಳಗಳು !

ಸೌಲನು ಇಸ್ರಾಯೇಲ್ಯರ ಮೊದಲ ಅರಸನು. ಇವನು ಅರಸನಾಗುವುದಕ್ಕೆ ಮೊದಲು ತನ್ನ ಮನೆಯಲ್ಲಿದ್ದ ಕಳೆದುಹೋದ ಕತ್ತೆಗಳನ್ನು ಹುಡುಕಲು ಹೋಗಿದ್ದನು. ಕತ್ತೆಗಳು ಸಿಕ್ಕದೆ ಹೋದುದರಿಂದ ದೇವರ ಮನುಷ್ಯನಾದ ಸಮುವೇಲನ ಬಳಿ ವಿಚಾರಿಸಲು ಹೋದನು. ಸಮುವೇಲನು ಸೌಲನಿಗೆ ಔತಣ ಕೊಡುತ್ತಾನೆ. ಮನೆಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಸೌಲನನ್ನು ದೇಶದ ಆಡಳಿತವನ್ನು ನಿರ್ವಹಿಸುವಂತೆ ಅರಸನನ್ನಾಗಿ ಅಭಿಷೇಕಿಸುತ್ತಾನೆ. ಸಮುವೇಲನ ಬಳಿಯಿಂದ ಸೌಲನು ಸಂತೋಷದಿಂದ ಹಿಂದಿರುಗುತ್ತಾನೆ (1 ಸಮು. 9:10).

ಸೌಲನು ಅರಸನಾದ ನಂತರ ದೇವರನ್ನು ಬಿಟ್ಟು ಹಿಂಜಾರಿ ಹೋಗುತ್ತಾನೆ. ಒಮ್ಮೆ ಯುದ್ಧಮಾಡಬೇಕಾಗಿ ಬಂದಾಗ ಸತ್ತವರಲ್ಲಿ ವಿಚಾರಿಸುವ ಕಣಿಯವಳಾದ ಒಬ್ಬ ಸ್ತ್ರೀಯ ಬಳಿ ವಿಚಾರಿಸಲು ಹೋಗುತ್ತಾನೆ. ಅವಳನ್ನು ಬಿಟ್ಟು ಹಿಂದಿರುಗಿದಾಗ ಮರುದಿನ ಯುದ್ಧದಲ್ಲಿ ಸತ್ತುಹೋಗುತ್ತಾನೆ (1 ಸಮು. 28:7–25).

ದೇವರ ಮನುಷ್ಯನ ಬಳಿ ದೇವರ ಮಾತುಗಳನ್ನು ಕೇಳಲು ಹೋದವನು ಅರಸನಾಗುತ್ತಾನೆ. ಕಣಿ ಕೇಳಲು ಹೋದಾಗ ನಾಶವಾದನು. ನೀವೆಲ್ಲಿಗೆ ಹೋಗುತ್ತೀರಿ?

## ದೇವರ ಚಿತ್ತವೇ ಕೊನೆಯಲ್ಲಿ ಘನ ಹೊಂದುವುದು!

ಸತ್ಯವೇದದಲ್ಲಿ 10ನೆಯ ಪುಸ್ತಕ 2 ಸಮುವೇಲ. 40 ವರ್ಷಗಳ ಕಾಲ ಚರಿತ್ರೆಯನ್ನು ತನ್ನಲ್ಲಿಟ್ಟುಕೊಳ್ಳುತ್ತದೆ. ಸೌಲನು ಕಾಲವಾದ ನಂತರ ಅಭಿಷೇಕಿಸಲ್ಪಟ್ಟ ದಾವೀದನು ಅರಸನಾಗಬೇಕು. ಆದರೆ ಕೆಲವು ಮನುಷ್ಯರ ಆಲೋಚನೆಯಂತೆ ಸೌಲನ ಮಗನಾದ ಈಷ್ಬೋಶೆತನು 2 ಗೋತ್ರಗಳ ಮೇಲೆ ಅರಸನಾದನು. ದಾವೀದನಾದರೋ ಯೂದಾ ಗೋತ್ರಕ್ಕೆ ಮಾತ್ರ ಅರಸನಾಗಿ ತಾಳ್ಮೆಯಿಂದ ರಾಜ್ಯಭಾರ ಮಾಡುತ್ತಾನೆ (2 ಸಮು. 3:9–10).

ಮನುಷ್ಯ ಚಿತ್ತದಂತೆ ಆಳ್ವಿಕೆಗೆ ಬಂದವನ ಬಳಿ 16 ಗೋತ್ರಗಳೂ ದೇವರ ಚಿತ್ತದಂತೆ ಆಳ್ವಿಕೆಗೆ ಬಂದವನ ಬಳಿ ಒಂದೇ ಒಂದು ಗೋತ್ರ. ದೇವರ ಚಿತ್ತವು ಅಲ್ಪವಾಗಿ ಮನುಷ್ಯ ಚಿತ್ತವು ಘನಹೊಂದುವಂತೆ ಕಾಣುತ್ತದೆ ಅಲ್ಲವೇ? ಆದರೆ ದಾವೀದನಾದರೋ ಬರಬರುತ್ತಾ ಬಲಶಾಲಿಯಾಗುತ್ತಾನೆ. ಸೌಲನ ಕುಟುಂಬದವರು ಬರಬರುತ್ತಾ ಬಲಹೀನರಾಗುತ್ತಾರೆ (2ಸಮು. 3:1).

ಎರಡು ವರ್ಷದೊಳಗೆ ಈಷ್ಬೋಶೇತನು ಕೊಲ್ಲಲ್ಪಡುತ್ತಾನೆ. ಇಡೀ ಇಸ್ರಾಯೇಲ್ಯರು ದಾವೀದನ ಅಧೀನಕ್ಕೆ ಬರುತ್ತಾರೆ. ದೇವಜನರೇ! ದೇವರ ಉದ್ದೇಶದಂತೆ, ದೇವರ ಚಿತ್ತದಂತೆ ಪ್ರಾರಂಭವಾಗುವ ನಿಮ್ಮ ಕಾರ್ಯಗಳು ಮೊದಲು ಅಲ್ಪವಾಗಿ ಕಂಡರೂ ಅಂತ್ಯವು ಸಂಪೂರ್ಣವಾದದ್ದಾಗಿರುತ್ತದೆ. ಆರಂಭವು ಆರ್ಭಟವಾಗಿ ಕಂಡರೂ ರೆಪ್ಪೆ ಬಡಿಯುವಷ್ಟರಲ್ಲಿ ಇಲ್ಲದೆ ಹೋಗುವ ಲೋಕದ ಕಾರ್ಯಗಳನ್ನು ಕಂಡು ಕಳವಳಪಡಬೇಡಿರಿ.

*ಸಂಗ್ರಹ.*

ಮನುಷ್ಯಕುಮಾರನು ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು (ಲೂಕ. 19:10).

# ನಗೆ ಹನಿಗಳು

ಗುಂಡ :– ಅಪರೇಷನ್ ಯಾವಾಗ ಡಾಕ್ಟರ್ ?
ಡಾಕ್ಟರ್ : ಯಾಕಪ್ಪಾ?
ಗುಂಡ : ಹಾಗೇ ಸುಮ್ಮನೆ ಕೇಳಿದೆ!
ಡಾಕ್ಟರ್ : ನಾಳೆ ಬೆಳಿಗ್ಗೆ ಅಪರೇಷನ್ ಇಂದು ಎರಡು ಚಪಾತಿ ಮಾತ್ರ ತಿನ್ನಬೇಕು ...
ಗುಂಡ : ಊಟದ ಮೊದಲೋ ಅಥವಾ ನಂತರವೋ?

ಗುಂಡ ತನ್ನ ಗೆಳೆಯನನ್ನು ಕೂರಿಸಿಕೊಂಡು
ಒಂದೇ ಸಮ ಮಾತಾಡುತ್ತಿದ್ದ. ನಮ್ಮ ಸ್ನೇಹ ಬಾರಿ ದೊಡ್ಡದು ಕಣೋ....
ನೀನು ನಕ್ಕರೆ ನಾನು ನಗ್ತೇನೆ, ನೀನು ಅತ್ತರೆ ನಾನೂ ಅಳ್ತೇನೆ.
ನೀನು ಕಿಟಕಿಯಿಂದ ಕೆಳಗೆ ಬಿದ್ದರೆ, ನಾನು ಕಷ್ಟಪಟ್ಟು ಇಣುಕಿ ನೋಡುತ್ತೇನೆ,
ನಂತರ ಸಿಕ್ಕಾಪಟ್ಟೆ ನಗ್ತೇನೆ!

ಗುಂಡ : ನಾನು ಒಳಗೆ ಬರಬಹುದ ಸರ್
ಇಂಟರ್‌ವ್ಯೂ ಆಫೀಸರ್ : ವೈಟ್ ಪ್ಲೀಸ್
ಗುಂಡ : 75 ಕೆ.ಜಿ ಸರ್.

ನಾನು ಮದುವೆಯಾಗುವ ಹುಡುಗಿ
"ಕಪ್ಪ"ಗಿದ್ದರೂ ಪರವಾಗಿಲ್ಲ,
ನಾ ಮಾತನಾಡುವಾಗ
"ತೆಪ್ಪ"ಗಿದ್ದರೆ ಸಾಕು ॥:)

ಗುಂಡ ಬಸ್ಸ್ ಸ್ಟಾಪ್‌ನಲ್ಲಿ ಕಾಯ್ತು ಇದ್ದ
ಒಬ್ಬ ಬೈಕ್‌ನಲ್ಲಿ ಬಂದ.
ಮ್ಯಾನ್ : ಲಿಫ್ಟ್‌ಬೇಕ?
ಗುಂಡ : ಬೇಡ ನಮ್ಮ ಮನೆ ಗ್ರೌಂಡ್ ಪ್ಲೋರನಲ್ಲೆ ಇರೋದು.

## ಡಿಜಿಎಮ್ ಬೇತೇಲ್ ಅಂಕಣ

- ವಿಶ್ವಾಸದಮನೆಗೆ ಅಕ್ಕಿ, ಮಾಂಸ, ಹಾಗೂ ಊಟವನ್ನು ನೀಡಿದ ಎಲ್ಲಾ ದಾನಿಗಳಿಗೂ ವಿಶ್ವಾಸದಮನೆಯ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತೇವೆ ಹಾಗೂ ನಿಮಗಾಗಿ ಪ್ರಾರ್ಥಿಸುತ್ತೇವೆ.
- ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಟ್ಟ ಪವರ್ ಕಾನ್ಫರೆನ್ಸ್ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಯಿತು.
- ದಾಂಪತ್ಯ ಜೀವಿತಕ್ಕೆ ಕಾಲಿಟ್ಟಿರುವ ಸಹೋ॥ ಹೆರ್ಮನ್ ಪ್ರಶಾಂತ್ ಹಾಗೂ ಸಹೋ॥ ದಿವ್ಯಶ್ರೀಯವರಿಗೆ ಡಿಜಿಎಮ್ ಬೇತೇಲ್ ಸಭೆಯ ಪರವಾಗಿ ಮದುವೆಯ ಶುಭಾಶಯಗಳು.

## ಬೇಕಾಗಿದ್ದಾರೆ

**ಡಿಜಿಎಮ್ ಬೇತೇಲ್ ಇಂಟರ್‌ನ್ಯಾಷನಲ್ ಶಾಲೆಗೆ ಉಪಾಧ್ಯಾಯರು (ಟೀಚರ್) ಬೇಕಾಗಿದ್ದಾರೆ.**

8

ಉದ್ಧಾರಕನಾದ ಯಾವನೂ ಪುರುಷನೂ ಇಲ್ಲವೆಂದು ಕಂಡು ಸ್ತಬ್ಧನಾದನು; ಆತನ ಸ್ವಹಸ್ತವೇ ತನಿಗೆ ರಕ್ಷಣ ಸಾಧನವಾಯಿತು. ಆತನ ಧರ್ಮವೇ ಆತನಿಗೆ ಆಧಾರವಾಯಿತು (ಯೆಶಾ. 59:16).

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಕಲ್ಲಿದ್ದಲು ಗಣಿಗಳ ಮರುಹರಾಜಿಗೆ ಅನುಕೂಲ್ಲಿಸುವ ಸುಗ್ರೀವಾಜ್ಞೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ರಾಜ್ಯ ಸಭೆಯಲ್ಲಿ ಕಲ್ಲಿದ್ದಲು ಗಣಿಗಳ ವಿಶೇಷ ಪ್ರಸ್ತಾವಗಳು) ಮಸೂದೆ ಮಂಡಿಸಲು ಸಾಧ್ಯವಾಗದ ಕಾರಣ ಇದೀಗ ಸರ್ಕಾರ ಸುಗ್ರೀವಾಜ್ಞೆ ಹೊರಡಿಸುವುದು ಅನಿವಾರ್ಯವಾಗಿದೆ.
- ಅಸ್ಸಾಂನಲ್ಲಿ ಬೋಡೋ ಉಗ್ರರು ಮತ್ತೆ ರಕ್ತದೋಕುಳಿ ಹರಿಸಿದ್ದಾರೆ. ಸೋನಿತ್‌ಪುರ ಮತ್ತು ಕೊಕ್ರಜಾರ್ ಜಿಲ್ಲೆಗಳಲ್ಲಿ ನ್ಯಾಷನಲ್ ಡೆಮಾಕ್ರಟಿಕ್ ಫ್ರಂಟ್ ಆಫ್ ಬೋಡೋಲ್ಯಾಂಡ್ ಉಗ್ರರು ನಡೆಸಿದ ದಾಳಿಗೆ 35 ಮಂದಿ ಸಾವಿಗೀಡಾಗಿದ್ದಾರೆ.
- ಒಂದು ರೂಪಾಯಿ ಮುಖಬೆಲೆಯ ರೆವಿನ್ಯೂ ಸ್ಟ್ಯಾಂಪ್‌ಗಳನ್ನು ಮತ್ತೆ ಜಾರಿಗೆ ತರಲು ಇಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಹೈಕೋರ್ಟ್ ಆದೇಶಕ್ಕೆ ಅನುಗುಣವಾಗಿ ಇದನ್ನು ಜಾರಿ ಮಾಡುತ್ತಿದ್ದು, ವಾರ್ಷಿಕ ರೂ 10 ಕೋಟಿ ವರಮಾನ ನಿರೀಕ್ಷಿಸಲಾಗಿದೆ ಎಂದು ಕಾನೂನು ಸಚಿವ ಟಿ.ಬಿ. ಜಯಚಂದ್ರ ಸುದ್ದಿಗಾರರಿಗೆ ತಿಳಿಸಿದರು.
- ಜಮ್ಮು–ಕಾಶ್ಮೀರ ಹಂಗಾಮಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ತಮ್ಮನ್ನು ಹುದ್ದೆಯಿಂದ ಬಿಡುಗಡೆಗೊಳಿಸಲು ಕೋರಿರುವುದರಿಂದ ರಾಜ್ಯದಲ್ಲಿ ಉದ್ಭವಿಸಿರುವ ರಾಜಕೀಯ ಬಿಕ್ಕಟ್ಟಿನ ಬಗ್ಗೆ ರಾಜ್ಯಪಲ ಎನ್. ಎನ್. ವೋಹ್ರಾ ಅವರು ಕೇಂದ್ರಕ್ಕೆ ವರದಿ ಸಲ್ಲಿಸಿದ್ದಾರೆ. ಹೀಗಾಗಿ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಜಾರಿಗೊಳ್ಳುವ ಸಾಧ್ಯತೆ ಕುರಿತ ಅನುಮಾನ ಮತ್ತಷ್ಟು ಗಟ್ಟಿಯಾಗಿದೆ.
- ರಾಜ್ಯ ಸರ್ಕಾರದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮೆಟೆಡ್ (ಎಂಎಸ್‌ಐಎಲ್) ಸಂಸ್ಥೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಔಷಧ ವ್ಯಾಪಾರ ಮಳಿಗೆಗಳನ್ನು ತೆರೆಯಲಿದೆ ಮತ್ತು ಖನಿಜಯುಕ್ತ ನೀರಿನ ಬಾಟಲಿಗಳ ಮಾರಾಟ ಆರಂಭಿಸಲಿದೆ.
- ಪ್ರಕ್ಷುಬ್ಧ ಈಶಾನ್ಯ ನೈಜೀರಿಯಾದಲ್ಲಿ ಬೊಕೊ ಹರಮ್ ಉಗ್ರರು ಮತ್ತೆ ದಾಳಿ ನಡೆಸಿದ್ದು, ಕನಿಷ್ಠ 16 ಪಟ್ಟಣಗಳ ಮತ್ತು ಗ್ರಾಮಗಳನ್ನು ನಾಶ ಮಾಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.
- ಜಾವಾ ಸಮುದ್ರದಲ್ಲಿ ಪತನಗೊಂಡಿರುವ ಏರ್‌ಏಷ್ಯಾ– ವಿಮಾನದ ಹಿಂಭಾಗದ ಕೆಲ ಭಾಗಗಳು ಆಳ ಸಮುದ್ರದಲ್ಲಿ ಗೋಚರಿಸಿದ್ದು, ಇದನ್ನು ಬೃಹತ್ ಬಲೂನ್‌ಗಳ ಮೂಲಕ ಮೇಲೆಕ್ಕೆತ್ತಲಾಗುವುದು ಎಂದು ಶೋಧನಾ ಕಾರ್ಯದಲ್ಲಿ ತೊಡಗಿರುವ ಇಂಡೊನೇಷ್ಯಾದ ತಂಡದ ಮೂಲಗಳು ಹೇಳಿವೆ.

## ವಿಶೇಷ ಸೂಚನೆ

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820200781, 9902334941, 9964070654, 08202559712.**

ಆತನು ಮುಂಗಾರಿನಂತೆಯೂ ಭೂಮಿಯನ್ನು ತಂಪು ಮಾಡುವ ಹಿಂಗಾರಿನಂತೆಯೂ ನಮಗೆ ಸಿಕ್ಕುವನು (ಹೋಶೇ. 6:3).

## ನಗೆಹನಿಗಳು

ಗುಂಡ ಬ್ಯಾಂಕಿಗೆ ಹೋದ. ಆ ಮ್ಯಾನೇಜರ್‌ಗೆ ಯಾವಾಗಲೂ ಜನರಲ್ ನಾಲೆಜ್ ಪ್ರಶ್ನೆ ಕೇಳುವ ಚಟ. ಮ್ಯಾನೇಜರ್ ಕೇಳಿದ, ಸೈಕ್ಲೋನ್ ಎಂದರೇನು? ಸೈಕಲ್ ಖರೀದಿಸುವುದಕ್ಕೆ ಕೊಡುವ ಸಾಲವೇ ಸೈಕ್ಲೋನ್ ಎಂದ. ಅಂದಿನಿಂದ ಮ್ಯಾನೇಜರ್ ಜನರಲ್ ನಾಲೆಜ್ ಪರೀಕ್ಷೆ ಮಾಡುವ ದುಸ್ಸಾಹಸಕ್ಕೆ ಹೋಗಲಿಲ್ಲ.

ಗುಂಡ : ಮನೆಯ ಪ್ಲಗ್‌ನಲ್ಲಿ ಹೊಗೆ ಬರುತ್ತಾ ಇತ್ತು.
ಗುಂಡ ಸಿಟ್ಟಿನಿಂದ ಕೆ.ಇ.ಬಿಗೆ ಫೋನ್ ಮಾಡಿ ದಬಾಯಿಸಿದ......
ಗುಂಡ : ಯಾರ್ರಿ ಅದು ಆಫೀಸ್‌ನಲ್ಲಿ ಸಿಗರೇಟ್ ಸೇದಿ ನಮ್ಮ ಮನೆ ಪ್ಲಗ್‌ನಲ್ಲಿ ಹೊಗೆ ಬಿಡೋದು.........

ಕುಡುಕನೊಬ್ಬ ಟ್ಯಾಕ್ಸಿ ನಿಲ್ಲಿಸಿ ಕೂತು ಚಾರ್–ಮಿನಾರ್ ಕಡೆಗೆ ಬಿಡು ಎಂದ, ಸ್ವಲ್ಪ ಹೊತ್ತಾದ ನಂತರ ಚಾರ್–ಮಿನಾರ್ ಬಂತು:
ಕುಡುಕ: ಬಾಡಿಗೆ ಎಷ್ಟಾಯ್ತು?
ಡ್ರೈವರ್ : ಇಪ್ಪತ್ತು ರೂಪಾಯಿ
ಕುಡುಕ : ಜೇಬಿನಿಂದ ಹತ್ತು ರೂಪಾಯಿಯ ನೋಟೊಂದನ್ನು ಡ್ರೈವರಿಗೆ ಕೊಟ್ಟ.
ಡ್ರೈವರ್ : ಇದು ಹತ್ತು ರೂಪಾಯಿ
ಕುಡುಕ : ನೀನು ನನ್ನ ಹುಚ್ಚ ಅಂದ್ಕೊಂಡಿದ್ದಿಯೇನು? ನೀನೂ ನನ್ನ ಜೊತೆಗೆ ಕೂತ್ಕಂಡಿರಲಿಲ್ವ? ನಿನ್ನ ಬಾಡಿಗೆ ನಾನು ಕೊಡ್ಲ???




## ನಮ್ಮೊಂದಿಗೆ ಆಚರಿಸಿ



**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**

**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ, ನಿನ್ನನ್ನು ರಕ್ಷಿಸುವನು; ನಿನ್ನಲ್ಲಿ ಉಲ್ಲಾಸಿಸೇ ಉಲ್ಲಾಸಿಸುವನು (ಚೆಫ. 3:17).

**ಆರೋಗ್ಯ ಸ್ವರ**

# ಮೊಡವೆ ಮುಕ್ತ ಚರ್ಮ ನಿಮ್ಮದಾಗಲಿ



ಮೊಡವೆಗಳು ಹದಿಹರೆಯದಲ್ಲಿ ಕಾಡುವ ದು:ಸ್ವಪ್ನದಂತೆ ಮೊಡವೆಯಿಂದ ಉಂಟಾದ ಕಲೆಗಳು ನಿಧಾನಕ್ಕೆ ಹೋಗಲಾಡಿಸಬಹುದು. ಆದರೆ ರಂಧ್ರಗಳು ಉಂಟಾದರೆ ಮುಖದ ಅಂದವೇ ಕೆಡುತ್ತದೆ.

ದೇಹದೊಳಗಿನ ಅಶುದ್ಧ ರಕ್ತವು ಮೊಡವೆಗಳಿಗೆ ಅಸ್ಪದ ನೀಡಬಲ್ಲದು. ಹೀಗಾಗಿ ದೇಹದ ಒಳಗಿನ ಹಾಗೂ ಹೊರಗಿನ ಆರೋಗ್ಯ ಇಲ್ಲಿ ಮುಖ್ಯವಾದದ್ದು. ರಕ್ತವನ್ನು ಶುದ್ಧಗೊಳಿಸುವ ಎಲ್ಲ ತರನಾದ ಸಿರಪ್‌ಗಳು, ಟಾನಿಕ್‌ಗಳು ಹಾಗೂ ಆಹಾರ ಪದಾರ್ಥಗಳನ್ನು ನೀವು ಈ ಉದ್ದೇಶಕ್ಕಾಗಿ ಸೇವಿಸಬಹುದು.

ಆದರೆ ಆಹಾರ ಪದಾರ್ಥಗಳು ಹಾಗೂ ಸಮತೋಲಿನ ಆಹಾರ ಕ್ರಮ ಇವೆರಡರ ಹೊರತಾಗಿಯೂ ಮೊಡವೆಗಳನ್ನು ತಡೆಗಟ್ಟಲು ನೆರವಾಗುವುದು ಈ ಕೆಲವು ಸರಳವಾದ ಕ್ರಮಗಳು. ಹೊರಗಿನಿಂದ ಮನೆಗೆ ಬಂದ ನಂತರ ಮುಖ ತೊಳೆದುಕೊಳ್ಳಿ. ಹೀಗೆ ಮುಖವನ್ನು ಸ್ವಚ್ಚಗೊಳಿಸಿಕೊಳ್ಳುವುದರಿಂದ ಧೂಳು ಹಾಗೂ ಮಾಲಿನ್ಯದಿಂದ ಮುಕ್ತವಾಗಿಸಿಕೊಳ್ಳಬಹುದು. ಸ್ವಚ್ಚಗೊಳಿಸುವಾಗ ತಣ್ಣೀರನ್ನು ಉಪಯೋಗಿಸಿ. ಬಿಸಿ ನೀರನ್ನು ಉಪಯೋಗಿಸಿದರೆ ಗುಳ್ಳೆಗಳಾಗುವ ಸಾಧ್ಯತೆಯಿದೆ.

- ಹೆಚ್ಚಿನವರಿಗೆ ತಮ್ಮ ತ್ವಚೆಯನ್ನು ಆಗಾಗ ಮುಟ್ಟುವ ಅಭ್ಯಾಸವಿರುತ್ತದೆ. ಇದರಿಂದ ತ್ವಚೆಯಲ್ಲಿರುವ ಮೊಡವೆಗಳ ಬೆಳವಣಿಗೆಗೆ ಸಹಾಯವಾಗುತ್ತದೆ. ಹಾಗೆ ಮಾಡದಿರಿ.
- ಕೇಶವನ್ನು ನಿಯಮಿತವಾಗಿ ತೊಳೆದುಕೊಳ್ಳುವುದರ ಮೂಲಕ ಅದರಲ್ಲಿರಬಹುದಾದ ಹೆಚ್ಚುವರಿ ತೈಲಾಂಶವನ್ನು ನಿವಾರಿಸಿಕೊಳ್ಳಬಹುದು.
- ಚಾಕೊಲೇಟ್, ಎಣ್ಣೆಯಲ್ಲಿ ಕರಿದ ಹಾಗೂ ಜಿಡ್ಡಿನ ಪದಾರ್ಥಗಳು ನಿಮ್ಮ ತ್ವಚೆಯ ಆರೋಗ್ಯಕ್ಕೆ ಹಿತಕರವಲ್ಲ, ಕಾಳುಗಳು, ಹಣ್ಣುಗಳ ಸೇವನೆಯಿಂದ ತ್ವಚೆಯು ಆರೋಗ್ಯಪೂರ್ಣವಾಗಿ ಮೊಡವೆಗಳಿಂದ ಮುಕ್ತವಾಗಿರಿಸುತ್ತದೆ.

**ಮೊಡವೆ ಮುಕ್ತ ತ್ವಚೆಗೆ ಸರಳ ಪರಿಹಾರಗಳು**

- ಕೊತ್ತಂಬರಿ ಸೊಪ್ಪಿನ ರಸದೊಂದಿಗೆ ನಿಂಬೆರಸ ಮಿಶ್ರಮಾಡಿ, ಕ್ರಮವಾಗಿ ಹಚ್ಚುತ್ತಿದ್ದರೆ ಮೊಡವೆ ಹಾಗೂ ಚರ್ಮದ ಮೇಲಿನ ಕಲೆಗಳು ಕಣ್ಮರೆಯಾಗುವುದು.
- ಕಿತ್ತಲೆ ಹಣ್ಣಿನ ಸಿಪ್ಪೆಯಿಂದ ಮುಖಕ್ಕೆ ಉಜ್ಜುತ್ತಿದ್ದರೆ ಮೊಡವೆಗಳು ಒಣಗುವುದು.
- ಎಳೆನೀರಿನಿಂದ ಮುಖ ತೊಳೆಯುತ್ತಿದ್ದರೆ ಮೊಡವೆಗಳು ಮಾಯವಾಗುತ್ತವೆ, ಅಲ್ಲದೆ ಕಪ್ಪುಕಲೆಗಳು ಮಾಯವಾಗಿ ಹೊಳಪು ಹೆಚ್ಚುತ್ತದೆ.
- ಸೇಬಿನ ತಿರುಳನ್ನು ಅರೆದು ಮುಖಕ್ಕೆ ಲೇಪಿಸಿಕೊಳ್ಳುವುದರಿಂದ ಮೊಡವೆಗಳು ಮಾಯವಾಗಿ ಮುಖದ ಕಾಂತಿ ಹೆಚ್ಚುತ್ತದೆ.
- ನಿಂಬೆರಸದಲ್ಲಿ ದಾಲ್ಚಿನ್ನಿಯನ್ನು ತೇಯ್ದು ಮೊಡವೆಗಳಿಗೆ ಹಚ್ಚಿದರೆ ಬೇಗ ಒಣಗುವುದು.
- ಒಂದು ಚಮಚ ಜೇನು ತುಪ್ಪಕ್ಕೆ ಸ್ವಲ್ಪ ಚಕ್ಕೆಪುಡಿಯನ್ನು ಮಿಶ್ರಣಮಾಡಿ ಮುಖಕ್ಕೆ ಹಚ್ಚುವುದರಿಂದ ಮೊಡವೆ ಮಾಯವಾಗುತ್ತದೆ.
- ಟೊಮೊಟೊ ಮತ್ತು ಸೌತೆಕಾಯಿಯನ್ನು ಹಚ್ಚಿದರೆ ಮೊಡವೆ ಕಡಿಮೆಯಾಗಿ, ಕಲೆಯೂ ಮಾಯವಾಗುತ್ತದೆ.
- ತುಳಸಿಯನ್ನು ನೀರಿನಲ್ಲಿ 20 ನಿಮಿಷ ಕುದಿಸಿ, ತಣ್ಣಗಾದ ಮೇಲೆ ಮುಖಕ್ಕೆ ಹಚ್ಚಿದರೆ ಮೊಡವೆ ಮಾಯವಾಗುತ್ತದೆ.
- ಮೆಂತ್ಯವನ್ನು ಪುಡಿಮಾಡಿ ಸ್ವಲ್ಪ ನೀರು ಮತ್ತು ನಿಂಬೆ ರಸ ಹಾಕಿ ಪೇಸ್ಟ್ ಮಾಡಿ ಮುಖಕ್ಕೆ ಹಚ್ಚಿದರೆ 25–30 ದಿನಗಳಲ್ಲಿ ಮೊಡವೆ ಗುಣಮುಖವಾಗುತ್ತದೆ.
- ಅಡುಗೆ ಸೋಡ ಹಾಗೂ ನಿಂಬೆರಸದ ಮಿಶ್ರಣವನ್ನು ಮುಖದ ಮೇಲೆ ಹಚ್ಚಿಕೊಳ್ಳುವುದರ ಮೂಲಕ ಮುಖವನ್ನು ಮೊಡವೆಗಳಿಂದ ಮುಕ್ತವಾಗಿರಿಸಬಹುದು.

*ಸಂಗ್ರಹ.*

ನನ್ನ ಮಾತಿಗೆ ಕಿವಿಗೊಡುವವನಾದರೋ ಸ್ವಸ್ಥವಾಗಿರುತ್ತಾ ಯಾವ ಕೇಡಿಗೂ ಭಯಪಡದೆ ಸುರಕ್ಷಿತನಾಗಿರುವನು (ಜ್ಞಾನೋ. 1:33).

# ಮನೆ ಮದ್ದುಗಳು

ಸೌತೆಕಾಯಿ ಸೌತೆಕಾಯಿಯನ್ನು ಸಿಪ್ಪೆ ಸಹಿತ ಕತ್ತರಿಸಿ ಕಾಳುಮೆಣಸಿನಪುಡಿ ಮತ್ತು ಉಪ್ಪಿನೊಂದಿಗೆ ಸೇರಿಸಿಕೊಂಡು ತಿನ್ನುತ್ತಾ ಬಂದರೆ ಜೀರ್ಣಶಕ್ತಿ ಹೆಚ್ಚುವುದು. ಸೌತೆಕಾಯಿ ತಿರುಳಿನಿಂದ ಅಂಗಾಲು ಉಜ್ಜಿಕೊಂಡರೆ ಕಣ್ಣುಗಳ ಉರಿ ಶಮನ. ಚೆನ್ನಾಗಿ ನಿದ್ರೆ ಬರುತ್ತದೆ. ಮುಖದ ಚರ್ಮದ ಮೇಲೆ ಸೌತೆಕಾಯಿಯ ಚೂರುಗಳನ್ನು ತಿಕ್ಕಿದರೆ ಮುಖ ಕಾಂತಿಯುಕ್ತವಾಗುವುದು.

ಏಲಕ್ಕಿ ಅಜೀರ್ಣದ ಸಮಸ್ಯೆಯಿಂದ ಬಳಲುತ್ತಿರುವವರು ಏಲಕ್ಕಿ ಸೇವಿಸಿದರೆ ಶಮನಗೊಳ್ಳುವುದು. ಏಲಕ್ಕಿಯಿಂದ ಆಹಾರ ಜೀರ್ಣವಾಗಿ ಬಾಯಿಗೆ ರುಚಿಯುಂಟಾಗುತ್ತದೆ. ಒಣಕೆಮ್ಮು ಕಾಣಿಸಿಕೊಂಡಾಗ ಏಲಕ್ಕಿ ಪುಡಿಗೆ ಸ್ವಲ್ಪ ಶುಂಠಿ ಪುಡಿಯನ್ನು ಸೇರಿಸಿ ಸೇವಿಸಿದರೆ ಪರಿಣಾಮ ಬೀರುವುದು. ಮೇಲಿಂದ ಮೇಲೆ ಭೇದಿಯಾಗುತ್ತಿದ್ದರೆ ಸ್ವಲ್ಪ ಏಲಕ್ಕಿಯನ್ನು ಬೆಣ್ಣೆಯೊಡನೆ ಅರೆದು ತಿನ್ನುವುದರಿಂದ ಭೇದಿ ಕಡಿಮೆಯಾಗುತ್ತದೆ.

**ಮೆಣಸು :** ಮೆಣಸನ್ನು ಚೆನ್ನಾಗಿ ಪುಡಿಮಾಡಿ ಶುಂಠಿಯ ರಸದೊಡನೆ ಸೇವಿಸುವುದರಿಂದ ಅಜೀರ್ಣವು ನಿವಾರಣೆಯಾಗುತ್ತದೆ. ಕೆಲವು ಮೆಣಸಿನ ಕಾಳುಗಳನ್ನು ನೀರಿನಲ್ಲಿ ತೇಯ್ದು ಮೊಡವೆಗಳಿರುವ ಜಾಗಕ್ಕೆ ಹಚ್ಚಿದರೆ ವಾಸಿಯಾಗುತ್ತವೆ. ಹೊಟ್ಟೆಯಲ್ಲಿ ಜಂತುಹುಳಗಳ ಉಪಟಳ ಜಾಸ್ತಿಯಾದಾಗ ಬೆಳಗ್ಗೆ ಮತ್ತು ರಾತ್ರಿ ಮೆಣಸಿನ ಕಷಾಯವನ್ನು ಕುಡಿಯುವುದು ಪರಿಣಾಮಕಾರಿ.

**ಈರುಳ್ಳಿ :** ಈರುಳ್ಳಿ ಊಟದ ಜೊತೆ ಹಲವು ದಿನಗಳವರೆಗೆ ಪ್ರತಿನಿತ್ಯ ಹಸಿ ಈರುಳ್ಳಿಯನ್ನು ತಿನ್ನುವುದರಿಂದ ರಕ್ತಹೀನತೆ ವಾಸಿಯಾಗುತ್ತದೆ. ಪಟಾಕಿ ಸಿಡಿದು ಉಂಟಾದ ಗಾಯಗಳಿಗೆ ಈರುಳ್ಳಿಯನ್ನು ಜಜ್ಜಿ ಕಟ್ಟುವುದರಿಂದ ನೋವು ಕಡಿಮೆಯಾಗುತ್ತದೆ. ಮೂಗಿನಿಂದ ಆಗಾಗ್ಗೆ ರಕ್ತ ಒಸರುತ್ತಿದ್ದರೆ, ಮೂಗಿಗೆ ಒಂದೆರಡು ತೊಟ್ಟು ಈರುಳ್ಳಿ ರಸವನ್ನು ಹಾಕುವುದರಿಂದ ರಕ್ತ ಒಸೆರುವುದು ನಿಲ್ಲುವುದು.

**ಕಡಲೆಕಾಳು :** ಕಡಲೆ ಬೇಳೆಯನ್ನು ಚೆನ್ನಾಗಿ ಬೇಯಿಸಿ ಬೆಲ್ಲದೊಡನೆ ರುಬ್ಬಿ ತಯಾರಿಸಿದ ಹೂರಣವನ್ನು ಮಿತ ಪ್ರಮಾಣದಲ್ಲಿ ಹಲವು ದಿವಸ ತಿಂದರೆ ಶರೀರದ ತೂಕವು ಹೆಚ್ಚಾಗುವುದು. ಹುರಿದ ಕಡಲೆಯ ಹಿಟ್ಟನ್ನು ಕೆಂಡದ ಮೇಲೆ ಹಾಕಿ ಬಂದ ಹೊಗೆಯನ್ನು ಕುಡಿಯುವುದರಿಂದ ಬಿಕ್ಕಳಿಕೆ ನಿಲ್ಲುತ್ತದೆ.

**ಶುಂಠಿ :** ಶೀತ ಅಥವಾ ಇನ್ನಾವುದೇ ತೊಂದರೆಗಳಿಂದ ಗಂಟಲು ಕಟ್ಟಿ ಸರಿಯಾಗಿ ಮಾತನಾಡಲು ತೊಂದರೆಯಾದರೆ, ಹಸಿಶುಂಠಿ, ಲವಂಗ ಮತ್ತು ಸ್ವಲ್ಪ ಅಡುಗೆ ಉಪ್ಪು ಸೇರಿಸಿ ಬಾಯಿಗೆ ಹಾಕಿಕೊಂಡು ಚಪ್ಪರಿಸಿದರೆ ಗಂಟಲು ಕಟ್ಟುವುದು ನಿವಾರಣೆಯಾಗುತ್ತದೆ. ಶುಂಠಿ ಸುಟ್ಟು ಬೂದಿ ಮಾಡಿಟ್ಟುಕೊಂಡು ಅದಕ್ಕೆ ಸ್ವಲ್ಪ ಉಪ್ಪು ಬೆರೆಸಿ ಹಲ್ಲುಜ್ಜುವುದರಿಂದ ಬಾಯಿ ವಾಸನೆ ಕಡಿಮೆಯಾಗುತ್ತದೆ.

**ಮೆಂತ್ಯಸೊಪ್ಪು :** ಸಕ್ಕರೆ ರೋಗ ನಿಯಂತ್ರಣದಲ್ಲಿ ಮೆಂತ್ಯಸೊಪ್ಪು ಸಹಕಾರಿ. ಸಕ್ಕರೆ ಕಾಯಿಲೆ ಕಾಣಿಸಿಕೊಂಡ ಆರಂಭದಲ್ಲಿಯೇ ಪ್ರತಿದಿವಸ ಬೆಳಿಗ್ಗೆ ಮೆಂತ್ಯ ರಸವನ್ನು ಕುಡಿಯುತ್ತಾ ಬಂದರೆ ಪರಿಣಾಮ ಬೀರುವುದು. ಮೆಂತ್ಯಸೊಪ್ಪಿನಂತೆಯೇ ಮೆಂತ್ಯದ ಕಾಳು ಕೂಡ ಔಷಧೀಯ ಗುಣಗಳನ್ನು ಹೊಂದಿದೆ.

**ಎಳ್ಳು :** ಸುಟ್ಟಗಾಯಕ್ಕೆ ಎಳ್ಳೆಣ್ಣೆ ಹಚ್ಚಿದರೆ ಗಾಯ ಬೇಗ ವಾಸಿಯಾಗುತ್ತದೆ. ಎಳ್ಳು ಮತ್ತು ಸೌತೆಬೀಜವನ್ನು ಅರೆದು ಹಾಲು, ತುಪ್ಪದೊಡನೆ ಸೇರಿಸಿ ಕುಡಿಯುವುದರಿಂದ ಉರಿಮೂತ್ರ ಗುಣವಾಗುತ್ತದೆ.

**ಸಾಸಿವೆ (ಮಸ್ಟರ್ಡ್) :** ಹಲ್ಲು ನೋವಿರುವವರು ಸ್ವಲ್ಪ ಸಾಸಿವೆ ಕಾಳನ್ನು ಅಗಿದು ಸ್ವಲ್ಪ ಹೊತ್ತಿನ ನಂತರ ಉಗಿಯಬೇಕು. ಜೊತೆಗೆ ಇದು ಹಸಿವನ್ನೂ ಹೆಚ್ಚಿಸುತ್ತದೆ. ಉಪ್ಪಿನಕಾಯಿಯಲ್ಲಿ ಸಾಸಿವೆಯನ್ನು ಸ್ವಲ್ಪ ಹೆಚ್ಚು ಬಳಸಿದರೆ, ಬೇಗ ಕೆಡುವುದಿಲ್ಲ. ಉಪ್ಪಿನಕಾಯಿ ಹಾಳಾಗಲು ಆಸ್ಪರ್ಜಲಿನ್ ಎಂಬ ಶಿಲೀಂಧ್ರ ಕಾರಣವಾಗಿದ್ದು, ಇದು ಬೆಳೆಯುವುದನ್ನು ಸಾಸಿವೆ ತಡೆಯುತ್ತದೆ.

**ಗೋಧಿ :** ಗೋಧಿ ಹಿಟ್ಟಿನ ಚಪಾತಿ ತಿಂದರೆ ಹೊಟ್ಟೆಯ ಹುಣ್ಣು ನಿವಾರಣೆಯಾಗುವುದು. ಹಲ್ಲು ಮತ್ತು ವಸಡುಗಳಿಗೆ ಶಕ್ತಿ ಬರುವುದು. ಗೋಧಿ ಹಿಟ್ಟಿನ ತಂಬಿಟ್ಟು ಮಾಡಿಕೊಂಡು ತಿಂದರೆ ಕೀಲು ಮತ್ತು ಎಲುಬು ನೋವು ಶಮನಗೊಳ್ಳುವುದು.

ಸಂಗ್ರಹ.

ಯೆಹೋವನ ಆತ್ಮವು ನನ್ನಲ್ಲಿ ಉಸುರಿತು; ಆತನ ವಾಕ್ಯವು ನನ್ನ ಬಾಯಲ್ಲಿತ್ತು
(2 ಸಮು. 23:2).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ನಿಮ್ಮಗೆಲ್ಲಾ ಸಂತಸ ಸುದ್ದಿ

# VOICE OF GOD
(ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುವದು (2 ಕೊರಿ. 12:9).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) **ಸ್ವಂತ ಮನಸ್ಸಿನಲ್ಲಿ ಅಪರಾಧಿಗಳೆಂಬ ಬರೆಗಳುಳ್ಳವರ ಮೂಲಕ ದುರ್ಘಟನೆ ಬರುತ್ತದೆ** (1 ತಿಮೊ. 4:1–2):– "ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತ ನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ. ಸುಳ್ಳುಬೋಧಕರು ಬಂದು ಸ್ವಂತ ಮನಸ್ಸಿನಲ್ಲಿ ಅಪರಾಧಿಗಳೆಂಬ ಬರೆಯುಳ್ಳವರಾದರೂ ತಾವು ನೀತಿವಂತರೆಂದು ತೋರ್ಪಡಿಸಿಕೊಂಡು ಅವರನ್ನು ಮರುಳುಗೊಳಿಸಿ" ಅನೇಕ ದೇವ ಸೇವಕರು ತಮ್ಮ ಸೇವೆಯ ಆರಂಭದಲ್ಲಿ ಒಳ್ಳೇ ಪ್ರಮಾಣಿಕ ಸೇವೆ ಮಾಡಿ ದೇವರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಕಾಲಕ್ರಮೇಣ ಯಾವುದೋ ರಹಸ್ಯ ಪಾಪದಲ್ಲಿ ಬಿದ್ದು ಏಳಲಾಗದೆ ಕೊನೆಗೆ ಆ ಪಾಪದಲ್ಲಿ ರಹಸ್ಯವಾಗಿ ಮುಂದುವರಿಯುತ್ತಾರೆ. ಕೊನೆಗೆ ಪಾಪವನ್ನು ಖಂಡಿಸಲು ಸಾಧ್ಯವಾಗದೇ ದೇವರ ವಾಕ್ಯವನ್ನು ತಿರುಚಿ ತಮ್ಮ ಪಾಪವನ್ನು ಸಮರ್ಥಿಸಿಕೊಳ್ಳುತ್ತಾರೆ. "ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ. ಆ ಜನರು ರಹಸ್ಯವಾಗಿ ನಡಿಸುವ ಕೆಲಸಗಳನ್ನು ಕುರಿತು ಮಾತಾಡುವದಾದರೂ ನಾಚಿಕೆಗೆ ಕಾರಣವಾಗಿದೆ" (ಎಫೆ. 5:11–12). ರಹಸ್ಯ ಪಾಪದಲ್ಲಿ ಜೀವಿಸುವ ಮತ್ತು ಪಾಪದಲ್ಲಿ ಬಿದ್ದು ಹೋದಂಥವರು, ಮಾನಸಾಂತರ ಪಟ್ಟು ತಿರುಗಿ ಕೊಳ್ಳದಿರುವಂತಹ ದೇವ ಸೇವಕರನ್ನು ಸೈತಾನನು ಹಿಡಿದು ಕೊಳ್ಳುತ್ತಾನೆ ಮತ್ತು ಅವರ ಮೂಲಕ ಪರಿಶುದ್ಧತೆಗೆ ವಿರುದ್ಧವಾದ ಮತ್ತು ಸ್ವಸ್ಥ ಬೋಧನೆಗೆ ವಿರುದ್ಧವಾದ ಉಪದೇಶಗಳನ್ನು ಕೊಟ್ಟು ಕ್ರೈಸ್ತ ವಿಶ್ವಾಸಿಗಳನ್ನು ದಾರಿ ತಪ್ಪಿಸಿ ಕ್ರಿಸ್ತನಂಬಿಕೆಯಲ್ಲಿ ಭ್ರಷ್ಟರಾಗುವಂತೆ ಮಾಡುತ್ತಾನೆ.

5) **ಹೊಟ್ಟೆ ಪಾಡಿಗಾಗಿ ಸೇವೆ ಮಾಡುವವರ ಮೂಲಕ ದುರ್ಬೋಧನೆ ಬರುತ್ತದೆ** :– "ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಅಂಥವರು ನಮ್ಮ ಕರ್ತನಾದ ಕ್ರಿಸ್ತನ ಸೇವೆಯನ್ನು ಮಾಡದೆ ತಮ್ಮ ಹೊಟ್ಟೆಯ ಸೇವೆಯನ್ನೇ ಮಾಡುವವರಾಗಿ ನಯದ ನುಡಿಗಳಿಂದಲೂ ಹೊಗಳಿಕೆಯ ಮಾತುಗಳಿಂದಲೂ ನಿಷ್ಕಪಟಿಗಳ ಹೃದಯಗಳನ್ನು ಮೋಸಗೊಳಿಸುತ್ತಾರೆ. ನಿಮ್ಮ ವಿಧೇಯತ್ವವೂ ಎಲ್ಲರಿಗೂ ಪ್ರಸಿದ್ಧವಾದದರಿಂದ ಇದನ್ನು ಬರೆದಿದ್ದೇನೆ; ನಿಮ್ಮ ವಿಷಯದಲ್ಲಿ ಆನಂದಪಡುತ್ತೇನೆ. ನೀವು ಒಳ್ಳೇತನದ ವಿಷಯದಲ್ಲಿ ಜಾಣರೂ ಕೆಟ್ಟತನದ ವಿಷಯದಲ್ಲಿ ಕಳಂಕವಿಲ್ಲದವರೂ ಆಗಿರಬೇಕೆಂದು ಅಪೇಕ್ಷಿಸುತ್ತೇನೆ. ಶಾಂತಿದಾಯಕನಾದ ದೇವರು ಶೀಘ್ರವಾಗಿ ಸೈತಾನನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿ ಬಿಡುವನು. ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮ್ಮೊಂದಿಗಿರಲಿ" (ರೋಮ. 16:17–20). ನಿಜವಾಗಿ ಜನರು ರಕ್ಷಣೆ ಹೊಂದಿ ಪರಲೋಕ ರಾಜ್ಯಕ್ಕೆ ಸೇರಬೇಕು, ರಕ್ಷಣೆ ಹೊಂದಿದವರು ಕೊನೆಯವರೆಗೂ ನಂಬಿಕೆಯಲ್ಲಿ ಸ್ಥಿರವಾಗಿ ನಿಲ್ಲಬೇಕು, ರಕ್ಷಣೆ ಹೊಂದಿದವರು ಪರಿಶುದ್ಧ ಜೀವನ ನಡೆಸಬೇಕು ಎಂಬ ಆಸೆ ನಿಜವಾದ ಒಬ್ಬ ದೇವರ ಸೇವಕನಲ್ಲಿ ಇರುತ್ತದೆ. ಸರಿಯಾದ ಉಪದೇಶ ಜನರಿಗೆ ಕೊಟ್ಟರೆ ಮಾತ್ರ ಅವರು ತಮ್ಮ ಮನೆಗಳಿಗೆ ಕರೆಸುವುದಿಲ್ಲ, ಕೊಡುವಂಥದ್ದನ್ನು ಕೊಡುವುದಿಲ್ಲವೆಂದು ಅರಿತಂಹ ಅನೇಕ ಸೇವಕರು ತಪ್ಪು ಮಾಡುತ್ತಿದ್ದರೂ ಅವರನ್ನು ಹೊಗಳುವುದು, ನಯವಾದ ಮಾತುಗಳಿಂದ ಅವರನ್ನು ವಂಚಿಸುವುದು ಇರುತ್ತದೆ. ಇಂದಿನ ದಿನಗಳಲ್ಲಿ ಮನೆ ಮನೆಗೆ ಹೋಗಿ ಪ್ರವಾದಿಸುವ ಸೇವಕರು ಹೇರಳವಾಗಿದ್ದಾರೆ ಅದು ಸರಿಯಾದ ಪ್ರವಾದನೆ. ಈ ಸೇವಕರ ಸಾಕ್ಷಿ ಸರಿಯಾಗಿದೆಯಾ? ಉಪದೇಶ ಸರಿಯಾಗಿದೆಯಾ? ಯಾವುದೇ ದೇವ ಸೇವಕರ ಆತ್ಮೀಕ ಹೊದಿಕೆಯಲ್ಲಿ ಅವರು ಇದ್ದಾರ? ಎಂದು ಜನರು ಸ್ವಲ್ಪ ಕೂಡ ಯೋಚನೆ ಮಾಡುವುದಿಲ್ಲ. ಆದುದರಿಂದ ಜನರು ಹೆಚ್ಚೆಚ್ಚಾಗಿ ಮೋಸಹೋಗುತ್ತಿದ್ದಾರೆ. ನಿಮಗೆ ಅವರು ಮಾಟ ಮಂತ್ರಮಾಡಿದ್ದಾರೆ, ಇವರು ಮಾಟ ಮಂತ್ರಮಾಡಿದ್ದಾರೆ ಎಂದು ಜನರಿಗೆ ಹೇಳಿದರೆ ಭಾರಿ ಖುಷಿ. ಇಂಥವರು ಕುಟುಂಬಗಳಲ್ಲಿರುವ ಅನ್ಯೋನ್ಯತೆಯನ್ನು ಕೆಡಿಸಿ ಬೇಧಗಳನ್ನು ಉಂಟು ಮಾಡುತ್ತಾರೆ. ಇಂಥವರಿಂದ ದೇವ ಜನರು ಅದಷ್ಟು ಎಚ್ಚರಿಕೆಯಾಗಿರಬೇಕು. "ಪವಿತ್ರಾತ್ಮನನ್ನು ನಂದಿಸಬೇಡಿರಿ; ಪ್ರವಾದನೆಗಳನ್ನು ಹೀನೈಸಬೇಡಿರಿ; ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ; ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ"(1ಥೆಸ.5:19–21). ದೇವ ಜನರಿಗೆ ಪ್ರೀತಿಯಿಂದ ಆಲೋಚನೆ ಕೊಡಲು ಇಷ್ಟಪಡುತ್ತೇನೆ. ಇಂಥ ಮನೆ ಮನೆಗೆ ತಿರುಗಾಡಿ ಪ್ರವಾದನೆ ಹೇಳುವಂತಹ ಬೇಕಾದ ರೀತಿಯಲ್ಲಿ ಉಪದೇಶ ಕೊಡುವಂಥ ಸೇವಕರ ಕುರಿತು ನಿಮಗೆ ಯಾರಾದರೂ ತಿಳಿಸಿದರೆ ನಿಮ್ಮ

ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ
(ಫಿಲಿ. 4:13).

ಸಭಾಪಾಲಕರಿಗೆ ತಿಳಿಸಿರಿ. ಸಭಾಪಾಲಕರು ಜೊತೆಯಲ್ಲಿ ಇರುವಾಗ ಮಾತ್ರ ಅವರನ್ನು ಆಹ್ವಾನಿಸಿರಿ. ಅದಕ್ಕಿಂತ ಮುಂಚೆ 1) ಅವರ ಸಾಕ್ಷಿ ಸರಿಯಾಗಿ ಇದೆಯಾ ನೋಡಿ ಅವರ ಬಗ್ಗೆ ಗೊತ್ತಿರುವ ಜನರಿಂದ ವಿಚಾರಿಸಿರಿ. 2) ಅವರ ಉಪದೇಶದ ಕುರಿತು ತಿಳಿದುಕೊಳ್ಳಿರಿ. 3) ಅವರ ಸೇವೆಯ ಕುರಿತು ತಿಳಿದುಕೊಳ್ಳಿರಿ. 4) ಅವರು ಬೇರೆ ಕಡೆಗಳಲ್ಲಿ ಸೇವೆಮಾಡಿದ ಸ್ಥಳಗಳಲ್ಲಿ ಅವರ ಕುರಿತು ವಿಚಾರಿಸಿರಿ ಮತ್ತೆ ನಿಮಗೆ ಸರಿಕಂಡರೆ ನಿಮ್ಮ ಸಭಾಪಾಲಕರ ಸಮಕ್ಷಮದಲ್ಲಿ ಕರೆಯಿರಿ ಅವಾಗ ನೀವು ಮೋಸ ಹೋಗಲು ಸಾಧ್ಯವಿಲ್ಲ. (ಇದು ರಕ್ಷಣೆ ಹೊಂದಿ ಪೂರ್ಣ ಸುವಾರ್ತೆ ಸಭೆಗಳಿಗೆ ಹೋಗುವಂತಹ ಕ್ರೈಸ್ತ ವಿಶ್ವಾಸಿಗಳಿಗೆ ಮಾತ್ರ ನನ್ನ ಪ್ರೀತಿಯ ಸಲಹೆಯಾಗಿದೆ).

6) **ಸತ್ಯವನ್ನು ಸರಿಯಾಗಿ ತಿಳುಕೊಳ್ಳದೇ ಇರುವುದರಿಂದಾಗಿ ಅಂಥ ವ್ಯಕ್ತಿಗಳಿಂದ ದುರ್ಬೋಧನೆ ಪ್ರಕಟವಾಗುತ್ತದೆ** :– ಇಂದು ಯೆಹೋವ ಸಾಕ್ಷಿಗಳು ನರಕ ಮತ್ತು ಸ್ವರ್ಗವನ್ನು ನಂಬುವುದಿಲ್ಲ. ನರಕ ಇದೆ, ನಿತ್ಯ ಶಿಕ್ಷೆ ಇದೆ ಎಂದು ಒಪ್ಪಿದರೆ ಪಾಪಕ್ಕೆ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಬೇಕಾಗುತ್ತದೆ. ಸ್ವರ್ಗ ಇದೆ, ನಿತ್ಯತ್ವ ಇದೆ ಎಂದು ಒಪ್ಪಿದರೆ ಪರಿಶುದ್ಧವಾಗಿ ಜೀವಿಸಬೇಕಾಗುತ್ತದೆ. ಅದಕ್ಕಾಗಿ ನರಕವೂ ಇಲ್ಲ, ಸ್ವರ್ಗವೂ ಇಲ್ಲ ಎಂದು ವಾದಿಸುತ್ತಾರೆ. ಯಾರು ಒಪ್ಪಿದರೂ, ಒಪ್ಪದಿದ್ದರೂ ಸತ್ಯವೇದದಲ್ಲಿರುವ ದೇವರ ವಾಕ್ಯ ಮಾತ್ರ ಎಂದಿಗೂ ಬದಲಾಗುವುದಿಲ್ಲ "ಭೂಮ್ಯಾಕಾಶಗಳು ಅಳಿದು ಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವುದೇ ಇಲ್ಲ" (ಮತ್ತಾ. 24:35, ಲೂಕ. 21:33) ಎಂದು ಕರ್ತನಾದ ಯೇಸುಕ್ರಿಸ್ತನು ಹೇಳಿದ್ದಾನೆ. "ಅಪೊಲ್ಲೋಸನು ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರಮಾಡಿ ಎಫೆಸಕ್ಕೆ ಬಂದು ಕೆಲವು ಮಂದಿ ಶಿಷ್ಯರನ್ನು ಕಂಡು ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ ಇಲ್ಲ, ಪವಿತ್ರಾತ್ಮವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು. ಅವನು ನೀವು ಯಾವುದನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನಮಾಡಿಸಿಕೊಂಡೆವು ಅಂದರು. ಅದಕ್ಕೆ ಪೌಲನು ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬದಾಗಿ ಜನರಿಗೆ ಹೇಳಿದನು ಎಂದು ಹೇಳಲು ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು; ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು. ಅವರು ಸುಮಾರು ಹನ್ನೆರಡು ಮಂದಿಗಂಡಸರು" (ಅ.ಕೃ. 19:1–7).

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**

## ಬೇಕಾಗಿದ್ದಾರೆ

- **ಜಿಎನ್ಎಮ್ ನರ್ಸ್**
- **ಸ್ಟಾಫ್ ನರ್ಸ್**
- **ಎಮ್ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)**
- **ಎಮ್.ಬಿ.ಬಿ.ಎಸ್ ವೈದರು**
- **ಮನೋರೋಗ ತಜ್ಞ ವೈದ್ಯರು (ಸೈಕಿಯಾಟ್ರಿಸ್ಟ್)**
- **ಕ್ಲೀನರ್ ಮತ್ತು ವಾರ್ಡ್ ಬಾಯ್**
- **ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.**

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**9902334941, 0820 2002781.**

ನಾನು ಕ್ರಿಸ್ತನ ಶಾಂತಮನಸ್ಸನ್ನೂ ಸಾತ್ವಿಕತ್ವವನ್ನೂ ನೆನಪಿಗೆ ತಂದುಕೊಂಡು
ನಿಮಗೆ ಖಂಡಿತವಾಗಿ ಹೇಳುವೆನು (2 ಕೊರಿ. 10:1).

# ಆರಾಧನೆ

ವಯಸ್ಕರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ನಿಮ್ಮ ದೇವರಾದ ಯೆಹೋವನು ತನ್ನ ಹೆಸರನ್ನು ಸ್ಥಾಪಿಸಿಕೊಳ್ಳುವುದಕ್ಕೂ ತಾನು ವಾಸಮಾಡುವುದಕ್ಕೂ ನಿಮ್ಮ ಎಲ್ಲಾ ಕುಲಗಳೊಳಗಿನಿಂದ ಆದುಕೊಳ್ಳುವ ಸ್ಥಳದಲ್ಲೇ ನೀವು ಆತನ ದರ್ಶನಕ್ಕಾಗಿ ಕೂಡಬೇಕು. ಆ ಸ್ಥಳದಲ್ಲಿ ಮಾತ್ರ ದಶಮಾಂಶ ಕಾಣಿಕೆ ಇತ್ಯಾದಿ ಅರ್ಪಿಸಬೇಕು (ಧರ್ಮೋ. 12:4–6). ಇಂದು ಅನೇಕರು ಒಂದು ಸಭೆಯಲ್ಲಿ ರಕ್ಷಣೆ ಹೊಂದಿದರೆ ಆರಾಧನೆಗೆ ಇನ್ನೊಂದು ಸಭೆಗೆ ಈ ರೀತಿ ಬೆಕ್ಕು ಮರಿಗಳನ್ನು ಎತ್ತಿ ಸ್ಥಳಗಳನ್ನು ಬದಲಾಯಿಸಿದ ಹಾಗೇ ದಿನಕ್ಕೊಂದು ಸಭೆಗೆ ಹೋಗುತ್ತಾ, ದಿನ ಕಳೆಯುತ್ತಾರೆ. ಮತ್ತೆ ಕೆಲವರು ದಶಮಾಂಶವನ್ನು ಪಾಲು ಮಾಡಿ ಅನೇಕ ಸ್ಥಳಗಳಿಗೆ ಕಳಿಸಿಕೊಡುತ್ತಾರೆ. "ನೀವು ಕಂಡ ಕಂಡ ಸ್ಥಳಗಳಲ್ಲಿ ಸರ್ವಾಂಗ ಹೋಮಗಳನ್ನು ಸಮರ್ಪಿಸಬಾರದು" (ಧರ್ಮೋ. 12:13–14).

ನಾನು ನಿಮಗೆ ಆಜ್ಞಾಪಿಸಿದ ಎಲ್ಲಾ ಕಾಣಿಕೆಗಳನ್ನು, ಬೆಳೆಯ ದಶಮಾಂಶಗಳನ್ನು, ಹರಕೆ ಮಾಡಿದ ವಿಶೇಷ ಕಾಣಿಕೆ ಇವುಗಳನ್ನೆಲ್ಲಾ ಯೆಹೋವನು ತನ್ನ ಹೆಸರನ್ನು ಸ್ಥಾಪಿಸುವುದಕ್ಕೆ ಆದುಕೊಳ್ಳುವ ಸ್ಥಳಕ್ಕೆ ತರಬೇಕು (ಧರ್ಮೋ. 12:11). ದೇವ ಮಗುವೆ ನಿನ್ನನ್ನು ಆತ್ಮೀಕವಾಗಿ ಪೋಷಿಸುವ ಆತ್ಮೀಕ ತಂದೆ ತಾಯಿಗಳ ಕೈಗೆ ಅದನ್ನು ಕೊಡಬೇಕಾಗಿದೆ. "ಲೇವಿಯರು ಗುಡಾರದ ಪರಿಚರ್ಯವನ್ನು ಮಾಡುವುದಕ್ಕಾಗಿ ಇಸ್ರಾಯೇಲ್ಯರಿಂದ ಹತ್ತನೆ ಪಾಲನ್ನು ಗೊತ್ತು ಮಾಡಿ ಕೊಟ್ಟಿದ್ದೇನೆ" (ಅರಣ್ಯ. 18:21). "ಇಸ್ರಾಯೇಲ್ಯರು ಪ್ರತ್ಯೇಕಿಸಿ ಯೆಹೋವನಿಗೆ ಸಮರ್ಪಿಸುವ ಹತ್ತನೆಯ ಪಾಲನ್ನೇ ಲೇವಿಯರಿಗೆ ಸ್ವಾಸ್ಥ್ಯವಾಗಿ ಕೊಟ್ಟಿದ್ದೇನಲ್ಲಾ" (ಅರಣ್ಯ. 18:24). ಆದರೆ ಅದರಲ್ಲಿ 10ನೆಯ 1 ಪಾಲನ್ನು ಅವರು ದೇವರಿಗೆ ಪ್ರತ್ಯೇಕಿಸಿ ಸಮರ್ಪಿಸಬೇಕಾಗಿದೆ. ಸೇವಕರೂ, ಸಭಾಪಾಲಕರೂ ಸಹ ದಶಮಾಂಶವನ್ನು ಪ್ರತ್ಯೇಕಿಸಬೇಕೆಂದು ವಾಕ್ಯದಲ್ಲಿ ಬರೆಯಲ್ಪಟ್ಟಿದೆ (ಅರಣ್ಯ. 18:26).

5) **ಆರಾಧನೆ ಎಂಬುವುದು ದೇವರಿಗೆ ಮತ್ತು ನಮಗಿರುವ ಸಂಬಂಧವನ್ನು ಸೂಚಿಸುತ್ತದೆ** (ಆದಿ. 22:5):– ಅಬ್ರಹಾಮನು ಮೋರಿಯ ದೇಶಕ್ಕೆ ಸಮೀಪಿಸುವಾಗ ಆ ಸ್ಥಳವನ್ನು ಕಂಡು ಕತ್ತೆಯನ್ನು, ಸೇವಕರಿಬ್ಬರನ್ನು ಸ್ವಲ್ಪ ದೂರದಲ್ಲಿ ಬಿಟ್ಟು ಆರಾಧನೆಗೆ ಬೇಕಾದವುಗಳನ್ನು ಮಾತ್ರ ಕೊಂಡ್ಯೊಯ್ದನು. ಒಂದು ವೇಳೆ ಸೇವಕರನ್ನು ಕರೆದುಕೊಂಡು ಹೋಗಿರುವುದಾದರೆ ಅವರಿಂದಲೇ ಅಬ್ರಹಾಮನಿಗೆ ಇಸಾಕನನ್ನು ಬಲಿ ಅರ್ಪಿಸಲು ಅಡ್ಡಿಯಾಗುತ್ತಿತ್ತೋ ಏನೋ! ಇಂದು ಅನಗತ್ಯ ಸಂಗತಿಗಳು ನಮಗೆ ಆರಾಧನೆಗೆ ಅಡ್ಡಿಪಡಿಸುವುದಾದರೆ ಅದನ್ನು ನಮ್ಮೊಂದಿಗೆ ಒಯ್ಯಬಾರದು. ಏಕೆಂದರೆ ಆರಾಧನೆ ಎಂಬುವುದು ನಮ್ಮ ಮತ್ತು ದೇವರ ಸಂಬಂಧವನ್ನು, ಅನ್ಯೋನ್ಯತೆಯನ್ನು ಸೂಚಿಸುತ್ತದೆ. "ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ" (ಇಬ್ರಿ. 12:1–2).

6) **ಆರಾಧನೆಗೆ ಪರಿಪೂರ್ಣವಾದ ನಂಬಿಕೆ ಅಗತ್ಯವಾಗಿದೆ :–** (ಆದಿ. 22:5) ಒಬ್ಬನೇ ಮಗನನ್ನು ನನಗೆ ಅರ್ಪಿಸು ಎಂದು ದೇವರು ಹೇಳಿದರು ಆದರೂ ದೇವರ ಪ್ರೀತಿ ಕರುಣೆ ತಿಳಿದುಕೊಂಡ ಅಬ್ರಹಾಮನು ನಂಬಿಕೆಯಿಂದ ತನ್ನ ಸೇವಕರಿಗೆ ನೀವು ಇಲ್ಲೇ ಕತ್ತೆಯ ಬಳಿಯಲ್ಲಿರ್ರಿ. ನಾನೂ ನನ್ನ ಮಗನೂ ಅಲ್ಲಿಗೆ ಹೋಗಿ ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ತಿರುಗಿ ಬರುತ್ತೇವೆ ಎಂದು ನಂಬಿಕೆಯಿಂದ ಹೇಳಿದನು. ಅದಲ್ಲದೆ ಇಸಾಕನು ಅಬ್ರಹಾಮನನ್ನು ಹೋಮಕ್ಕೆ ಬೇಕಾದ ಕುರಿ ಎಲ್ಲಿ ಎಂದು ಕೇಳಿದ್ದಕ್ಕೆ ಅಬ್ರಹಾಮನು ಮಗನಿಗೆ ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು ಎಂದು ನಂಬಿಕೆಯಿಂದ ಹೇಳಿದನು (ಆದಿ. 22:7–8). ಅಬ್ರಹಾಮನ ನಂಬಿಕೆಯಂತೆ ಪೊದೆಯಲ್ಲಿ ಕೊಂಬುಗಳಿಂದ ಸಿಕ್ಕಿಕೊಂಡಿದ ಟಗರು ಹೋಮಕ್ಕೆ ಒದಗಿ ಬಂತು (ಆದಿ. 22:13) ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸಲು ಅಸಾಧ್ಯ (ಇಬ್ರಿ. 11:6). "ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ

ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಿನ ಭೂಷಣವೇ ನಿಮ್ಮ ಅಲಂಕಾರವಾಗಿರಲಿ.
ಇದು ಶಾಶ್ವತವಾದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ (1 ಪೇತ್ರ. 3:4).

ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ (ಇಬ್ರಿ. 10:22).

7) **ಸಂಪೂರ್ಣ ಸಮರ್ಪಣೆ ಆರಾಧನೆಗೆ ಅಗತ್ಯ** (ಆದಿ. 22:9) :– ಅಬ್ರಹಾಮನು ಒಬ್ಬನೇ ಮಗನಾದ ಇಸಾಕನನ್ನು ಸಮರ್ಪಿಸಲು ಮುಂದಾದನು. ಆರಾಧನೆ ಎಂದರೆ ಸಂಪೂರ್ಣವಾಗಿ ಸಮರ್ಪಿಸುವುದೇ ಆಗಿದೆ. ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವವಾದ ಆರಾಧನೆಯು (ರೋಮ. 12:1). ಹೃದಯ ಪೂರ್ವಕವಾದ ಆರಾಧನೆಯನ್ನು ಮಾಡುವವರಾಗಿರಬೇಕು. ಪೌಲನು ಬರೆಯುತ್ತಾನೆ, "ನಿಜವಾದ ಸುನ್ನತಿಯವರು ಯಾರೆಂದರೆ ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರೂ ಶರೀರ ಸಂಬಂಧವಾದವುಗಳಲ್ಲಿ ಭರವಸವಿಲ್ಲದವರೂ ಆಗಿರುವ ನಾವೇ" (ಫಿಲಿ. 3:3).

8) **ಭಯಭಕ್ತಿಯುಳ್ಳ ಆರಾಧನೆ** (ಆದಿ. 22:12) :– "ದೇವರು ಅಬ್ರಹಾಮನಿಗೆ ಹೇಳುತ್ತಾನೆ, ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂದು ಈಗ ತೋರಬೇಕು" ಕೆಲವರು ಭಯಭಕ್ತಿ ಎಂದರೆ ಕಣ್ಣು ಮುಚ್ಚಿ ಆರಾಧಿಸುವುದು ಎಂದು ಕೊಂಡು ಕಣ್ಣು ಮುಚ್ಚಿಕೊಂಡೇ ಆರಾಧಿಸುವರು. ಹೃದಯದ ಶುದ್ಧೀಕರಣ ಅಗತ್ಯವಿದೆ. "ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ; ಯಾಕಂದರೆ ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ" (ಇಬ್ರಿ. 12:28). "ನನ್ನ ಹಿರಿಯರ ದೇವರು, ಅಂದರೆ ಅಬ್ರಹಾಮನ ದೇವರೂ ಇಸಾಕನು ಭಯಭಕ್ತಿಯಿಂದ ಸೇವಿಸುವ ದೇವರೂ ಆಗಿರುವಾತನು"(ಆದಿ. 31:42). "ಇಸಾಕನು ಭಯಭಕ್ತಿಯಿಂದ ಸೇವಿಸುವ ದೇವರು" (ಆದಿ. 31:53). ಕೆಲವರು ಕುಣಿದು, ಜಿಗಿದು ಹಾಡಿ ಆರಾಧಿಸಿದರೂ ದೇವರಲ್ಲಿ ಭಯಭಕ್ತಿವಿಲ್ಲದವರಾಗಿರುತ್ತಾರೆ. ದಾವೀದನು ಪೂರ್ಣಾಸಕ್ತಿಯಿಂದ ದೇವರನ್ನು ಆರಾಧಿಸಿದರೂ (2 ಸಮು. 6:14) ಆತನು ಬತ್ಷೇಬೆಯೊಂದಿಗೆ ಪಾಪ ಮಾಡುವವನಾದನು ಆದರೆ ದೇವರು ಅವನಿಗೆ ಕೊಟ್ಟ ಶಿಕ್ಷೆ "ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವುದಿಲ್ಲ" (2 ಸಮು. 2:10).

9) **ಆರಾಧನೆಯಿಂದ ಒದಗುವುದು ಅಥವಾ ಹೊಂದಿಕೊಳ್ಳುವುದು** :– (ಲೂಕ. 22:14). ಇಲ್ಲದ್ದನ್ನು ಹೊಂದಿಕೊಳ್ಳಬಹುದಾಗಿದೆ. ಕರ್ತನನ್ನು ಆರಾಧಿಸುವುದು ನಮಗೆ ಸಮೃದ್ಧಿ ತರುವುದು, ಬಿಡುಗಡೆ ತರುವುದು. "ಲೋಕದ ಯಾವ ಕುಲದವರು ರಾಜಾಧಿರಾಜನನ್ನು ಆರಾಧಿಸುವುದಕ್ಕೆ ಬರುವುದಿಲ್ಲವೋ ಅವರಿಗೆ ಮಳೆ ಬರುವುದಿಲ್ಲ" (ಜೆಕ. 14:17).

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

**ಜಾಹಿರಾತು**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ಯೆಹೋವನು ನೀತಿಯನ್ನು ಸಾಧಿಸುವವನಾಗಿ ಕುಗ್ಗಿಹೋದವರೆಲ್ಲರ
ನ್ಯಾಯವನ್ನು ಸ್ಥಾಪಿಸುತ್ತಾನೆ (ಕೀರ್ತ. 103:6).

## BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 00720102575**
**Swift : ICICINBBXXX**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
**ಸಂಪಾದಕರು, 'ದೇವರ ಸ್ವರ', ಬೇತೇಲ್ ಚರ್ಚ್, ಯೇಸುಪುರ,**
**ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
**ಡಿಜಿಎಂ ಬೇತೇಲ್ ಕಛೇರಿ,**
**ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.**
Ph: (0820) 2589070, 200 2781
E-mial: dgmofficial@gmail.com

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

11) **ಪರಿಶುದ್ಧವಾಗಿ ಜೀವಿಸಲು ದೇವರು ಕರೆದಿರುವುದರಿಂದ** (1 ಥೆಸ. 4:7). ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ ಶುದ್ಧರಾಗಿರುವದಕ್ಕೆ ಕರೆದನು. ದೇವರ ಅನೇಕ ಕರೆಗಳನ್ನು ಸತ್ಯವೇದದಲ್ಲಿ ನಾವು ನೋಡುತ್ತೇವೆ. ಅದರಲ್ಲಿ ಒಂದು ಕರೆ ಪರಿಶುದ್ಧ ಜೀವಿತಕ್ಕಾಗಿದೆ. ದೇವರು ಪಾಪಿಗಳನ್ನು ಕರೆಯುತ್ತಾನೆ ಹಾಗೂ ಅವರು ಮಾನಸಾಂತರ ಪಟ್ಟು ಪರಿಶುದ್ಧ ಜೀವಿತ ನಡೆಸಬೇಕೆಂದು ಇಷ್ಟಪಡುತ್ತಾನೆ. ದೇವರು ನಮ್ಮನ್ನು ಕರೆದ ಮೇಲೂ ಅಂದರೆ ರಕ್ಷಣೆ ಹೊಂದಿದ ಮೇಲೂ ನಾವು ಪಾಪದಲ್ಲಿ ಜೀವಿಸಬಾರದು, ಪಾಪದ ಜೀವಿತದಿಂದ ಪರಿಪೂರ್ಣ ಬಿಡುಗಡೆ ಹೊಂದಿ ಪರಿಶುದ್ಧವಾದ ಜೀವಿತವನ್ನು ಜೀವಿಸಬೇಕು.

12). **ದೇವರು ನಮ್ಮನ್ನು ಆರಿಸಿದ ಉದ್ದೇಶವೇ ಪರಿಶುದ್ಧವಾಗಿ ಜೀವಿಸಲು** (ಎಫೆ. 1:4) :– ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರು, ದೋಷವಿಲ್ಲದವರು ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಲೋಕದ ಜನರೆಲ್ಲಾ ಪಾಪದಲ್ಲಿ ತುಂಬಿ ಜೀವಿಸುವಾಗ ದೇವರು ಅಬ್ರಹಾಮನ ಮೂಲಕ ಒಂದು ಜನಾಂಗವನ್ನು ತನಗಾಗಿ ಆರಿಸಿದಂತೆ ಹೊಸ ಒಡಂಬಡಿಕೆಯಲ್ಲಿ ಯೇಸುಕ್ರಿಸ್ತನ ಹೊಸ ಒಡಂಬಡಿಕೆಯ ಸಭೆಯಾದ ನಮ್ಮನ್ನು ಆರಿಸಿದ್ದಾನೆ.

## ಮಹಿಳೆಯರ ಸ್ವರ

13) **ಅದ್ಭುತಗಳನ್ನು ಹೊಂದಿಕೊಳ್ಳಲು** (ಯೆಹೋ. 3:5) :– ನಮ್ಮ ಜೀವಿತದಲ್ಲಿ ಕರ್ತನಿಂದ ಅದ್ಭುತಗಳನ್ನು ಹೊಂದಬೇಕಾದರೆ ನಾವು ಪರಿಶುದ್ಧವಾದ ಜೀವಿತವನ್ನು ಜೀವಿಸಬೇಕೆಂದು ಕರ್ತನು ಇಷ್ಟಪಡುತ್ತಾನೆ.

4) **ಅನ್ಯರನ್ನು ಮದುವೆಯಾದರು** :– "ಅವರೊಡನೆ ಬೀಗತನ ಮಾಡಬಾರದು; ಅವರ ಮಕ್ಕಳಿಗೆ ಹೆಣ್ಣುಗಳನ್ನು ಕೊಡಲೂಬಾರದು. ಅವರಿಂದ ತರಲೂ ಬಾರದು. ಹಾಗೆ ಮಾಡಿದರೆ ಅವರು ನಿಮ್ಮ ಮಕ್ಕಳನ್ನು ಯೆಹೋವನ ಸೇವೆಯಿಂದ ತಪ್ಪಿಸಿ ಇತರ ದೇವರುಗಳನ್ನು ಪೂಜಿಸುವದಕ್ಕೆ ತಿರುಗಿಸಾರು; ಆಗ ಯೆಹೋವನು ನಿಮ್ಮ ಮೇಲೆ ಕೋಪಗೊಂಡು ಬೇಗನೆ ನಿಮ್ಮನ್ನು ನಾಶಮಾಡುವನು" (ಧರ್ಮೋ. 7:3–4). ಲೋಕದ ನಾನಾ ದೇಶಗಳಿಗೆ ಕರ್ತನ ಸೇವೆಯನ್ನು ನನ್ನ ಪತಿ ಮಾಡಲು ಹೋಗುವ ನಿಮಿತ್ತವಾಗಿ ಕರ್ತನ ಸಭೆಗಳಲ್ಲಿ ನಡೆಯುವ ಅನೇಕ ಸಮಸ್ಯೆಗಳನ್ನು ಕಾಣಲು ಸಾಧ್ಯವಾಗಿದೆ. ಕೆಲವು ಕಡೆ ಸಭೆಯಲ್ಲಿ ನಡೆಯುವ ದುರಾಚಾರಗಳನ್ನು ಕಾಣುವಾಗ ದು:ಖವಾಗುತ್ತದೆ. ಅನೇಕ ದುರಾಚಾರಗಳಲ್ಲಿ ಒಂದು ಕ್ರೈಸ್ತ ವಿಶ್ವಾಸಿಗಳು ಅನ್ಯರನ್ನು ಮದುವೆ ಮಾಡಿಕೊಳ್ಳುವಂತದ್ದು. ಕರ್ತನಾದ ಯೇಸು ಕ್ರಿಸ್ತನು ತನ್ನ ಸಭೆಯನ್ನು ಲೋಕದಲ್ಲಿ ಇಟ್ಟನು. ಆದರೆ ಸೈತಾನನು ಇವತ್ತು ಲೋಕವನ್ನು ಸಭೆಯೊಳಗೆ ತರುತ್ತಿದ್ದಾನೆ. ಒಬ್ಬ ರಕ್ಷಣೆ ಹೊಂದಿದ ಕ್ರೈಸ್ತ ವಿಶ್ವಾಸಿಯು ರಕ್ಷಣೆ ಹೊಂದದ ಯುವಕ ಅಥವಾ ಯುವತಿಯೊಂದಿಗೆ ಮದುವೆಯಾಗಬಾರದು ಎಂದು ಸತ್ಯವೇದ ನಮ್ಮನ್ನು ಎಚ್ಚರಿಸುತ್ತದೆ. ಆದರೂ ಅನೇಕರು ದೇವರ ವಾಕ್ಯ ಗೊತ್ತಿದ್ದು ವಾಕ್ಯಕ್ಕೆ ಕಿವಿಗೊಡದೆ ಬೋಧಕರನ್ನು ತಾತ್ಸರ ಮಾಡಿ ಅನ್ಯರನ್ನು ಮದುವೆಯಾಗುವಂಥದ್ದನ್ನು ಕ್ರೈಸ್ತ ಸಭೆಗಳಲ್ಲಿ ನಾವು ಕಾಣಬಹುದು. ಇದರಿಂದಾಗಿ ಮದುವೆಯ ನಂತರದ ದಿನಗಳಲ್ಲಿ ಕುಟುಂಬ ಜೀವಿತದಲ್ಲಿ ಕರ್ತನ ಆಶೀರ್ವಾದಗಳನ್ನು ಕಳಗೊಂಡು ನಾನಾ ವಿಧವಾದ ಸಮಸ್ಯೆಗಳನ್ನು ಅನುಭವಿಸುತ್ತಾರೆ, ಅನೇಕ ವಿವಾಹ ವಿಚ್ಛೇದನಾ ಮಾಡಿಕೊಳ್ಳುತ್ತಾರೆ; ಇನ್ನು ಅನೇಕರು ನಂಬಿಕೆಯಲ್ಲಿ ಹಿಂಜರಿದು ಅಕ್ರಮ ಸಂಬಂಧವನ್ನಿಟ್ಟು ಕೊಳ್ಳುತ್ತಾರೆ, ಇನ್ನು ಕೆಲವರ ಮದುವೆಗಳು ಕೆಲವೇ ಕೆಲವು ದಿನಗಳು ಮಾತ್ರ ನಿಲ್ಲುತ್ತವೆ. ಅನೇಕರ ಕುಟುಂಬಗಳಲ್ಲಿ ಜಗಳ, ಪರಸ್ಪರ ಆರೋಪಗಳು ಪೊಲೀಸ್, ಕೋರ್ಟು ಕೇಸ್‌ಗಳನ್ನು ಪರಸ್ಪರ ಹಾಕಿ ಕರ್ತನ ನಾಮವನ್ನು ದೂಷಣೆಗೆ ಒಳಪಡಿಸುತ್ತಾರೆ ಇದಕ್ಕೆಲ್ಲಾ ಕಾರಣವೇನು?

"ಅಯ್ಯೋ, ನಾನು ಸದುಪದೇಶವನ್ನು ಎಷ್ಟು ದ್ವೇಷಿಸಿದೆ, ನನ್ನ ಹೃದಯವು ಬುದ್ಧಿವಾದವನ್ನು ಎಷ್ಟು ತಾತ್ಸಾರ ಮಾಡಿತು, ನನ್ನ ಬೋಧಕರ ಮಾತನ್ನು ಕೇಳದೆ ಹೋದೆನಲ್ಲಾ, ನನ್ನ ಉಪದೇಶಕರ ಕಡೆಗೆ ಕಿವಿಗೊಡಲಿಲ್ಲವಲ್ಲಾ! ನಾನು ಮಹಾಜನಸಭೆಯ ನಡುವೆ ಎಲ್ಲಾ ಕೇಡಿಗೂ ಸಿಕ್ಕಿಕೊಳ್ಳುವ ಹಾಗೆ ಆದೆನು ಎಂದು ಅಂದುಕೊಳ್ಳುವಿ" (ಜ್ಞಾನೋ. 5:12–14). "ನನ್ನ

ಯಥಾರ್ಥವಂತರು ದೇಶದಲ್ಲಿ ಸ್ವತಂತ್ರರಾಗಿರುವರು, ನಿರ್ದೋಷಿಗಳು ಅದರಲ್ಲಿ ನೆಲೆಯಾಗಿರುವರು (ಜ್ಞಾನೋ. 2:21).

ಗದರಿಕೆಯನ್ನು ಕೇಳಿ ತಿರುಗಿಕೊಳ್ಳಿರಿ; ಇಗೋ, ನಿಮ್ಮ ಮೇಲೆ ನನ್ನ ಆತ್ಮವನ್ನು ಸುರಿಸಿ ನನ್ನ ಮಾತುಗಳನ್ನು ನಿಮಗೆ ತಿಳಿಯಪಡಿಸುವೆನು. ನಾನು ಕರೆದಾಗ ನೀವು ತಿರಸ್ಕರಿಸಿದಿರಿ. ಕೈ ಚಾಚಿದರೂ ಯಾರೂ ಗಮನಿಸಲಿಲ್ಲ; ನನ್ನ ಬುದ್ಧಿವಾದವನ್ನು ಲಕ್ಷ್ಯಕ್ಕೆ ತಾರದೆ ನನ್ನ ತಿದ್ದುಪಾಟನ್ನು ಬೇಡವೆಂದು ತಳ್ಳಿಬಿಟ್ಟಿದ್ದೀರಿ. ಆದಕಾರಣ ಬಿರುಗಾಳಿಯಂತೆ ಅಪಾಯವೂ ತುಫಾನಿನಂತೆ ಆಪತ್ತೂ ಬಂದು ನಿಮಗೆ ಶ್ರಮಸಂಕಟಗಳು ಸಂಭವಿಸುವಾಗ ನಿಮ್ಮ ಅಪಾಯದಲ್ಲಿ ನಾನು ನಗುವೆನು; ನಿಮ್ಮ ಆಪತ್ತಿನಲ್ಲಿ ಪರಿಹಾಸ್ಯಮಾಡುವೆನು. ಆಗ ಅವರು ನನಗೆ ಮೊರೆಯಿಟ್ಟರೂ ನಾನು ಉತ್ತರ ಕೊಡೆನು, ನನ್ನನ್ನು ಆತುರದಿಂದ ಹುಡುಕಿದರೂ ನಾನು ಕಾಣಿಸೆನು. ಯಾಕಂದರೆ ಯೆಹೋವನ ಭಯಭಕ್ತಿಗೆ ಮನಸ್ಸಿಲ್ಲದೆ ತಿಳುವಳಿಕೆಯನ್ನು ಹಗೆ ಮಾಡಿದರು. ನನ್ನ ಆಲೋಚನೆಯನ್ನು ಕೇಳಲೊಲ್ಲದೆ ನನ್ನ ಗದರಿಕೆಯನ್ನೆಲ್ಲಾ ತಾತ್ಸಾರಮಾಡಿದರು. ಆದದರಿಂದ ಅವರು ತಮ್ಮ ನಡತೆಯ ಫಲವನ್ನು ಅನುಭವಿಸಿ ಸ್ವಂತ ಕುಯುಕ್ತಿಗಳನ್ನೇ ಹೊಟ್ಟೆ ತುಂಬಾ ಉಣ್ಣಬೇಕಾಗುವದು" (ಜ್ಞಾನೋ. 1:23–31).

ದೇವರ ವಾಕ್ಯ ನಮಗೆ ಪದೆ ಪದೇ ಅನ್ಯರನ್ನು ಮದುವೆಯಾಗಬೇಡಿ ಎಂದು ಪದೇ ಪದೇ ಎಚ್ಚರಿಸಿದರೂ ಅನೇಕರು ತಮ್ಮ ಇಷ್ಟ ಪ್ರಕಾರ ಮದುವೆಯಾಗಿ ಕೊನೆಗೆ ಜೀವಿತದಲ್ಲಿ ಸಮಾಧಾನವನ್ನೇ ಕಳಕೊಳ್ಳುವರು. ಒಂದು ದಿನ ಒಬ್ಬ ಸಹೋದರ ನನ್ನ ಪತಿಯವರ ಬಳಿಗೆ ಬಂದು ನಾನು ಮದುವೆಯಾಗಬೇಕೆಂದಿದ್ದೇನೆ ಅದಕ್ಕಾಗಿ ಪ್ರಾರ್ಥಿಸಿರಿ ಎಂದು ಕೇಳಿಕೊಂಡರು. ನನ್ನ ಪತಿಯವರು ಅವರಿಗೆ ಕೇಳಿದರು ಹುಡುಗಿ ಯಾವ ಸಭೆಯವರು? ಅವನು ಹೇಳಿದರು ಅವಳು ರಕ್ಷಣೆ ಹೊಂದಲಿಲ್ಲ, ಇಂಥಿಂಥ ಹಿನ್ನಲೆಯವಳು ನಾನು ಮದುವೆಯಾಗಿ ಅವಳನ್ನು ರಕ್ಷಣೆಗೆ ನಡೆಸುತ್ತೇನೆ ನೀವು ದೇವರ ಚಿತ್ತಕ್ಕಾಗಿ ಪ್ರಾರ್ಥಿಸಿ ಎಂದು ಕೇಳಿಕೊಂಡನು ನನ್ನ ಪತಿಯವರು ಅವನಿಗೆ ಹೇಳಿದರು ಮೊದಲನೆಯದಾಗಿ ಅನ್ಯರನ್ನು ಮದುವೆಯಾಗುವುದು ದೇವರ ಚಿತ್ತವಲ್ಲ, ಆತನ ಚಿತ್ತವನ್ನು ಸತ್ಯವೇದ ವಾಕ್ಯದ ಮೂಲಕ ತಿಳಿಸಿದ್ದಾನೆ, ಎರಡನೆಯದಾಗಿ ನೀನು ಮದುವೆಯಾಗಿ ಅವಳನ್ನು ರಕ್ಷಣೆಗೆ ತರುತ್ತೀಯಾ ಅಥವಾ ಅವಳು ನಿನ್ನನ್ನು ಲೋಕಕ್ಕೆಕೊಂಡು ಹೋಗುತ್ತಾಳಾ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ ಎಂದರು. "ಎಲೌ ಸ್ತ್ರೀಯೇ, ನಿನ್ನ ಗಂಡನನ್ನು ರಕ್ಷಿಸುವಿಯೋ ಏನೋ ನಿನಗೇನು ಗೊತ್ತು? ಎಲೈ ಪುರುಷನೇ, ನಿನ್ನ ಹೆಂಡತಿಯನ್ನು ರಕ್ಷಿಸುವಿಯೋ ಏನೋ ನಿನಗೇನು ಗೊತ್ತು? (1 ಕೊರಿ. 7:16). "ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ" (1 ಕೊರಿ. 10:12).

ಆ ಸಹೋದರನು ತುಂಬಾ ದು:ಖದಿಂದ ಹೊರಟು ಹೋದನು ಮದುವೆಯಾಯಿತು. ಆ ಮದುವೆಗೆ ನನ್ನನ್ನು ಕರೆಯಲಿಲ್ಲ. 6 ತಿಂಗಳು ಕೂಡ ಆ ಮದುವೆ ನಿಲ್ಲಲಿಲ್ಲ, ಮಾತ್ರವಲ್ಲದೆ ಹೆಂಡತಿಯ ಪ್ರೀತಿಯ ನಿಮಿತ್ತ ಈತನು ಮದುವೆಯಾದ ಆರಂಭದಲ್ಲಿ ಅನ್ಯರಾಧನೆಗೆ ಹೋಗಲು ಆರಂಭಿಸಿದನು. ತನ್ನ ಮನೆಯೊಳಗೆ ಅನ್ಯರಾಧನೆಗಳನ್ನು ಅನುಮತಿಸಿದನು. ಸ್ವಲ್ಪ ಸಮಯದಲ್ಲಿ ಮದುವೆಯೂ ಮುರಿದು ಬಿತ್ತು. ಈತನು ಆತ್ಮೀಕ ಜೀವಿತದಲ್ಲಿ ಹಿಂಜರಿದು ದೇವರಲ್ಲಿರುವ ನಂಬಿಕೆಯನ್ನು ಕಳೆದುಕೊಂಡು ಇವತ್ತು ಒಬ್ಬ ಅವಿಶ್ವಾಸಿಯಾಗಿ ಜೀವಿಸುತ್ತಿದ್ದಾನೆ. "ಮನುಷ್ಯನು ಮೂರ್ಖತನದಿಂದ ತನ್ನ ಗತಿಯನ್ನು ಕೆಡಿಸಿಕೊಂಡು ಯೆಹೋವನ ಮೇಲೆ ಕುದಿಯುವನು" (ಜ್ಞಾನೋ. 19:3). ನನಗೆ ಗೊತ್ತಿರುವಂತಹ ಒಬ್ಬ ಸಹೋದರಿಯಿದ್ದಾಳೆ. ಅವಳು ಸತ್ಯವೇದ ಶಾಲೆಯಲ್ಲಿ ಒಂದು ಕಡೆ 3 ವರ್ಷ, ಇನ್ನೊಂದು ಕಡೆ 2 ವರ್ಷ ಕಲಿತವಳು. ದೇವರ ವಾಕ್ಯದ ಬಗ್ಗೆ ಒಳ್ಳೆ ಜ್ಞಾನವನ್ನು ಹೊಂದಿದವಳು. ಒಬ್ಬ ಅನ್ಯ ಹುಡುಗನೊಂದಿಗೆ ಪ್ರೀತಿ ಬೆಳೆಯಿತು ಕೊನೆಗೆ ತನ್ನ ಸಭಾಪಾಲಕರ ಬಳಿ ತಂದು ಇವನಿಗೆ ದೀಕ್ಷಾಸ್ನಾನ ಕೊಡಿ ಎಂದು ಕೇಳಿಕೊಂಡಳು. ಸಭಾಪಾಲಕರು ಎಷ್ಟು ಕೇಳಿಕೊಂಡರೂ ಕೇಳಲಿಲ್ಲ, ಕೊನೆಗೆ ಸಭಾಪಾಲಕರು ವಿಧಿ ಇಲ್ಲದೆ ದೀಕ್ಷಾಸ್ನಾನದ ಬಗ್ಗೆ ಕಲಿಸಿ ನಂತರ ದೀಕ್ಷಾಸ್ನಾನ ಕೊಟ್ಟರು. ಮದುವೆಯಾಗುವುದಕ್ಕೆ ಮುಂಚೆ ಆತನು ಹೇಳಿದ ನಾನು ಇನ್ನು ಮುಂದೆ ಕರ್ತನಾದ ಯೇಸುಕ್ರಿಸ್ತನಿಗಾಗಿ ಜೀವಿಸುತ್ತೇನೆಂದು ಆದರೆ ಮದುವೆಯಾದ ಒಂದೇ ವಾರದಲ್ಲಿ ಸಮಸ್ಯೆ ಶುರುವಾಯಿತು. ತನ್ನ ಮನೆಯಲ್ಲಿರುವ ಅನ್ಯದೇವತೆಗಳನ್ನು ಬಲವಂತವಾಗಿ ಪೂಜಿಸಲು ಒತ್ತಾಯಿಸಿದ, ಅನ್ಯದೇವಾಲಯಗಳಿಗೆ ಬಲವಂತವಾಗಿ ಕರೆದೊಯ್ದು ಇವಳನ್ನು ಸಭೆಗೆ ಆರಾಧನೆಗೆ ಬರಲು

ಯೆಹೋವನು ನಿನ್ನ ಭರವಸಕ್ಕೆ ಆಧಾರನಾಗಿದ್ದು ನಿನ್ನ ಕಾಲು ಪಾಶಕ್ಕೆ ಸಿಕ್ಕದಂತೆ ನಿನ್ನನ್ನು ಕಾಪಾಡುವನು (ಜ್ಞಾನೋ. 3:26).

ಅಡ್ಡಿ ಮಾಡಿದ, ಪೊಲೀಸ್ ಕಂಪ್ಲೆಂಟ್ ಆಯಿತು, ಕೋರ್ಟನಲ್ಲಿ ಕೇಸ್ ಆಯಿತು. ಇವತ್ತು ಒಂದು ಮಗುವಿನೊಂದಿಗೆ ತಾಯಿ ಮನೆಯಲ್ಲಿ ಕಣ್ಣೀರು ಸುರಿಸುತ್ತಾ ಕಾಲ ಕಳೆಯುತ್ತಿದ್ದಾಳೆ.

ನನ್ನ ಪ್ರಿಯ ಸಹೋದರ, ಸಹೋದರಿಯರೇ, ಇನ್ನು ಅನೇಕ ದೃಷ್ಟಾಂತಗಳನ್ನು ನಿಮಗೆ ಹೇಳಬಲ್ಲೇ ಒಬ್ಬ ಕ್ರೈಸ್ತ ವಿಶ್ವಾಸಿಯು ಅನ್ಯ ಯುವಕ, ಯುವತಿಯನ್ನು ಮದುವೆಯಾಗುವುದು ದೇವರ ಚಿತ್ತ ಅಲ್ಲ, ಒಬ್ಬ ಸಹೋದರನು ನನಗೆ ಗೊತ್ತು ಆತನು ಒಳ್ಳೆಯ ವಿಶ್ವಾಸಿಯಾಗಿದ್ದವನು, ಅನೇಕರಿಗೆ ಸುವಾರ್ತೆಯನ್ನು ಕೊಡುತ್ತಿದ್ದನು. ಅವನ ಕುಟುಂಬದಲ್ಲಿ ಅವನೊಬ್ಬನು ಮಾತ್ರ ರಕ್ಷಣೆ ಹೊಂದಿದ್ದನು. ಅದಕ್ಕಾಗಿ ಅವನ ಮನೆಯವರು ಮದುವೆ ವಿಚಾರದಲ್ಲಿ ತಮ್ಮದೇ ಜಾತಿಯ ಹೆಣ್ಣನ್ನು ಮದುವೆಯಾಗಲು ಒತ್ತಾಯಿಸುತ್ತಿದ್ದರು. ಈತನು ದೇವರ ವಾಕ್ಯ ಗೊತ್ತಿದ್ದರೂ ಗಲಿಬಿಲಿಗೊಳಗಾಗಿದ್ದನು. ಈತನು ತನ್ನ ಸಭಾಪಾಲಕರ ಬಳಿ ಆಲೋಚನೆ ಕೇಳಲು ಹೋದಾಗ ಸಭಾಪಾಲಕರು ಈಗ ನೀನು ನಿನ್ನ ಮನೆಯವರು ಹೇಳಿದ ಹಾಗೆ ಮಾಡು ನಿನ್ನ ಮನೆಯವರನ್ನು ಕರ್ತನಿಗಾಗಿ ಗೆಲ್ಲಬೇಕಲ್ಲ, ಅವರನ್ನು ಪ್ರೀತಿಸಿ ರಕ್ಷಣೆಗೆ ನೀನು ತರಬೇಕಲ್ಲವೇ ಅವರನ್ನು ದು:ಖಪಡಿಸಬಾರದು ಎಂದು ಆಲೋಚನೆ ಕೊಟ್ಟರು. ನನ್ನ ಪತಿಯವರ ಬಳಿಗೆ ಈ ಸಹೋದರ ಬಂದಾಗ ಖಡಾ ಖಂಡಿತವಾಗಿ ಹೇಳಿದರು ಇದು ದೇವರ ವಾಕ್ಯಕ್ಕೆ ವಿರೋಧ. ಕಾಲಕ್ರಮೇಣ ನೀನು ಕೂಡ ನಂಬಿಕೆ ಕಳಕೊಳ್ಳಬೇಕಾಗುತ್ತದೆ ಆದಕಾರಣ ಮನೆಯವರಿಗೆ ಸರಿಯಾಗಿ ಪ್ರೀತಿಯಿಂದ ವಿವರಿಸಿ ಹೇಳಿ ರಕ್ಷಣೆ ಹೊಂದಿದ ಹುಡುಗಿಯನ್ನೇ ಮದುವೆಯಾಗು ಎಂದು ನನ್ನ ಪತಿಯವರು ಆಲೋಚನೆ ಕೊಟ್ಟರು. ಆದರೆ ಆತನು ತನ್ನ ಮನೆಯವರು ಹೇಳಿದ ಹುಡುಗಿಯನ್ನೇ ಮದುವೆಯಾದ. ಈ ಮದುವೆ ಸತತವಾಗಿ 6 ವರ್ಷಗಳ ಕಾಲ ನಿಂತಿತು. ಆದರೆ ಒಂದು ದಿನ ಕೂಡ ಈತನಿಗೂ, ಈತನ ಪತ್ನಿಗೂ ಸಂತೋಷವಾಗಲಿ, ಸಮಾಧಾನವಾಗಲಿ ಇರಲಿಲ್ಲ. ಪ್ರತಿದಿನ ಜಗಳ, ಹೆಂಡತಿ ಅವಳು ಹೋಗುವ ದೇವಾಲಯಕ್ಕೆ ಕರೆಯುವುದು, ಈತನು ತನ್ನ ಸಭೆಗೆ ಕರೆಯುವುದು, ಆತನ ಹೆಂಡತಿಯು ದೇವ ಜನರನ್ನು ತಿರಸ್ಕರಿಸತೊಡಗಿದಳು. 6 ವರ್ಷಗಳಲ್ಲಿ ವಿವಾಹ ವಿಚ್ಛೇದನಾ ತೆಗೆದುಕೊಂಡು ದೂರವಾದರು. ಈಗ ಇಬ್ಬರು ಕಣ್ಣೀರಿನೊಂದಿಗೆ ಜೀವಿಸುತ್ತಾ ಇದ್ದಾರೆ.

***ಮುಂದುವರಿಯುವದು.........***

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ1ದಾಸಿಯಾದ,
**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು;
ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು (ಜ್ಞಾನೋ. 3:6).



## ಮಕ್ಕಳ ಸ್ವರ

1) ಆ ಅಂಕುರದ ಮೇಲೆ ಯಾವ ಆತ್ಮವಿತ್ತು? (ಯೆಶಾ. 11:2)
2) ಯೆಹೋವ ದೇವರು ಯಾವುದರಿಂದ ಅಂಗಿಗಳನ್ನು ಮಾಡಿದನು? (ಆದಿ. 3:21)
3) ಅಂಗೈಯಷ್ಟು ಚಿಕ್ಕದಾದದ್ದು ಯಾವುದು? (1 ಅರಸು. 18:44).
4) ಕರ್ತನು ನಮ್ಮನ್ನು ಯಾವುದರಲ್ಲಿ ಚಿತ್ರಿಸಿದ್ದಾನೆ? (ಯೆಶಾ. 49:15).
5) ಯಾರು ಅಂಧಕಾರದಲ್ಲಿ ಮುಳುಗಿದ್ದಾರೆ? (1 ಸಮು. 2:9).
6) ದೇವರು ನಮ್ಮನ್ನು ಯಾವುದರಿಂದ ಬಿಡಿಸಿದ್ದಾನೆ? (ಕೊಲೊ. 1:13).
7) ರಾಹೇಲಳು ಯಾರ ಮೇಲೆ ಹೊಟ್ಟೆಕಿಚ್ಚುಪಟ್ಟಳು? (ಆದಿ. 30:1).
8) ನಾವೆಯ ಅಗಲ ಎಷ್ಟು? (ಆದಿ. 6:15).
9) ಯಾವ ವಿಷಯಗಳನ್ನು ಕತ್ತಲೊಳಗಿಂದ ಬೈಲಿಗೆ ತರುತ್ತಾನೆ? (ಯೋಬ. 12:22).
10) ಗುಡಾರದ ಬಟ್ಟೆಯ ಮೊಳ ಎಷ್ಟು? (ಆದಿ. 36:9).

**ಜನವರಿ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1) ತಂದೆತಾಯಿಗಳ
2) ತಂದೆತಾಯಿಗಳನ್ನು
3) ಮೇಲಾಗುವದು.
4) ಕ್ರಿಸ್ತನಿಗೆಂದು
5) ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ
6) ಸರ್ವಾಯುಧಗಳನ್ನು
7) ಸಮಾಧಾನದ ವಿಷಯವಾದ
8) ಶಿರಸ್ತ್ರಾಣವನ್ನು
9) ದೇವರ ವಾಕ್ಯವೆಂಬ
10) ತುಖಿಕನು.

## ಪ್ರಾರ್ಥನಾ ಮನವಿಗಳು

- **ಈ ವರ್ಷದಲ್ಲಿ ದೇವರ ಸ್ವರ ಮಾಸ ಪತ್ರಿಕೆಯ ಸೇವೆಯು ವಿಸ್ತರಣೆಯಾಗುವಂತೆ, ಈ ಸೇವೆಗೆ ಬೇಕಾದ ಆರ್ಥಿಕ ಅವಶ್ಯಕತೆಗಳು ಸಂಧಿಸಲ್ಪಡುವುದಕ್ಕಾಗಿ ಪ್ರಾರ್ಥಿಸಿರಿ.**
- **ನಮ್ಮ ಭಾರತದ ದೇಶದಲ್ಲಿರುವ ಎಲ್ಲಾ ಉಗ್ರವಾದಿಗಳನ್ನು, ಭಯೋತ್ಪಾದಕರನ್ನು, ಕರ್ತನು ಮುಟ್ಟುವುದಕ್ಕಾಗಿ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿರುವ ಭಯೋತ್ಪಾದನೆ, ಭ್ರಷ್ಟಚಾರ, ಆತ್ಯಾಚಾರ, ಅಹಿಂಸೆಗಳು ದೇಶದಲ್ಲಿ ನಡೆಯದಂತೆ ಕರ್ತನು ಪ್ರತಿಯೊಂದು ಜನರನ್ನು ಸಂರಕ್ಷಿಸುವಂತೆ ಪ್ರಾರ್ಥಿಸಿರಿ.**
- **ಕರ್ತನ ಬರೋಣ ಹತ್ತಿರವಾಗಿರುವುದರಿಂದ ಪ್ರತಿಯೊಂದು ವಿಶ್ವಾಸಿಗಳು ಕ್ರಿಸ್ತನಿಗಾಗಿ ರಕ್ಷಣೆಯಲ್ಲಿ ಕೊನೆವರೆಗೆ ದೃಢವಾಗಿ ನಿಲ್ಲಲ್ಲು ಕರ್ತನು ನಂಬಿಕೆಯಲ್ಲಿ ಬಲಪಡಿಸುವಂತೆ ಪ್ರಾರ್ಥಿಸಿರಿ.**
- **ವಿಶ್ವಾಸದಮನೆ ಅನಾಥಾಶ್ರಮ, ಮಾನಸಿಕ ಅಸ್ವಸ್ಥರ ಪುನರ್‌ವಸತಿ ಕೇಂದ್ರ, ವೃದ್ಧಾಶ್ರಮ, ಅಂಗವಿಕಲರ ಪುನರ್‌ವಸತಿ ಕೇಂದ್ರ ಹಾಗೂ ಸ್ಫೂರ್ತಿ ವಿಶ್ವಾಸದಮನೆಯ ಸೇವೆಗಳಿಗಾಗಿ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿ ಅತಿವೃಷ್ಟಿ ಅನಾವೃಷ್ಟಿ ಆಗದಂತೆ ವಾತವರಣವನ್ನು ಕರ್ತನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ನೆಡೆಸುವಂತೆ ಹಾಗೂ ದೇಶದಲ್ಲಿ ಸಮಾಧಾನ, ಸಮೃದ್ಧಿ ನೆಲೆಸುವಂತೆ.**

ಯೆಹೋವನು ನಿನ್ನ ಭರವಸಕ್ಕೆ ಆಧಾರನಾಗಿದ್ದು ನಿನ್ನ ಕಾಲು ಪಾಶಕ್ಕೆ
ಸಿಕ್ಕದಂತೆ ನಿನ್ನನ್ನು ಕಾಪಾಡುವನು (ಜ್ಞಾನೋ. 3:26).